ಸಂಗೀತ ಪೂಜಾಷ್ಟಕ

ಕವಯಿತ್ರಿ ಸೆಲ್ಲಿಕಾರು 'ಜೈನಮಹಿಳೆ'

ಸ್ವರ್ಗೀಯ ಶ್ರೀಮತಿ ರಾಧಾಮ್ಮನವರಿಂದ ವಿರಚಿತ

ಶ್ರೀ ಜಿನೇಶ್ವರ ಭಕ್ತಿಗೀತೆಗಳು

ಸಮವಸರಣ ವರ್ಣನೆ

ರಾಗ-ಕಲ್ಯಾಣಿ — ರೂಪಕತಾಳ

ಏನು ರಮ್ಯ ಏನು ಸೌಮ್ಯ ಅಮಮ ಸಮವಸರಣವು। ಜ್ಞಾನಧರನೆ ತೀರ್ಥಕರನೆ ನಿನ್ನ ಸಭಾಭವನವು॥ ಗಗನದಲ್ಲಿ ರಾಜಿಸಿ ಮಿಗೆ ಸೊಗವ ಬೀರಿ ನಾಲ್ಕುದೆಸೆಗೆ। ಜಗಕೆ ನೀಡಿ ಶಾಂತಿಯೊಸಗೆ ಮೆರೆವ ಮಹಿಮೆ ನಿನ್ನದು॥ ಭವ ದುಃಖವ ತವೆ ತಗ್ಗಿಸಿ ಶಿವ ಸೌಖ್ಯವ ನೀವುದು ॥೧॥

ಘಾತಿಕರ್ಮಾವಳಿಯ ಜ್ಞಾನಜ್ಯೋತಿ ನಿನ್ನೊಳುದಿಸಲು। ಭೂತಳದಿಂ ದ್ವೈಸಹಸ್ರಚಾಪವನಿತು ನೆಗೆಯಲು॥ ಸುರದುಂದುಭಿ ಮೊಳಗಲಲ್ಲಿ ಸುರಪನಾಜ್ಞೆ ಈಯಲಿಲ್ಲ। ವರಕುಬೇರ ಭಕ್ತಿಯಲ್ಲಿ ಸಮವಸರಣ ರಚಿಸಲು। ರವಿಯು ಶಶಿಯು ಕಳೆಯು ಜರೆವ ನಿನ್ನ ಕಾಂತಿ ಪೊಳೆಯಲು ೨॥

ಹೇಮಮಯದ ರೂಪ್ಯಮಯದ ರತ್ನಮಯದ ಕೋಟೆಯು ಕಾಮಧೇನು ಕಲ್ಪವೃಕ್ಷಕಿಹುದೆ ಜಗದಿ ಸಾಟಿಯು॥ ವರಅಶೋಕ ತರುವಿನಲ್ಲಿ ಸುರಿವ ಕುಸುಮವರುಷದಲ್ಲಿ। ಮೆರೆವ ಗಂಧಕುಟಿಯೊಳಲ್ಲಿ ಕಮಲದಳವ ಸೋಂಕದೆ॥ ಶೌರ್ಯದಲ್ಲಿ ನಿಲುವರಾರು ನೀನೆಯೋರ್ವನಲ್ಲದೆ ॥೩॥

ಸುರರ ಕೂಡಿ ತ್ವರೆಯ ಮಾಡಿ ಸುರವರನೈತಂದನೈ। ನಿನ್ನ ಚರಣ ಪೂಜಿಸಿ ಗುಣಕೀರ್ತಿಪೆ ನಾನೆಂದನೆ॥ ಆಡುತಿರ್ಪ ನಾಟ್ಯದಿಂದ ಪಾಡುವ ಸಂಗೀತದಿಂದ। ಬೇಡಿಕೊಂಬ ಸ್ತುತಿಗಳಿಂದ ನಿನ್ನ ಪೊಗಳ್ದನಲ್ಲವೆ॥ ಬಂಧುರ ಸುಮವೃಂದವಾ ತಂದು ಸುರಿದನಲ್ಲವೆ ॥೪॥

ಸೊಂಪನೀವ ಸೊಬಗನೀವ ತರುಲತಾ ಸಮೂಹವೊ। ಕಂಪನೀವ ಪೆಂಪನೀವ ಫಲಗಳ ಸಂದೋಹವೊ॥ ಸುಮನ ಸುರಭಿಗಾಳಿಯೋ ಮೊರೆಯುವ ಭೃಂಗಾಳಿಯೋ। ಶುಕದ ಪಿಕದ ಕೇಳಿಯೋ ಅಲ್ಲಲ್ಲವೂ ಮೆರೆವುದೈ॥ ಕಣ್ಣನೆಳೆವ ಮನವ ಸೆಳೆವ ವನಂ ಶೋಭೆಗೊಡುವುದೈ ॥೫॥

ಗೀತಶಾಲೆ ವೇದಶಾಲೆ ಯಜ್ಞಶಾಲೆ ಸುಂದರಂ। ನಾಟ್ಯಶಾಲೆ ಚಂದ್ರಶಾಲೆ ಭದ್ರಶಾಲೆ ಬಂಧುರಂ॥ ಬನದ ಕೊಳದ ಸಿರಿಯೊಳಲ್ಲಿ ಸುಳಿಯುವ ತಂಬೆಲರಿನಲ್ಲಿ। ಮಲಯಜಾತ ಸೌರಭದಲಿ ನಿನ್ನ ಶಾಂತಿ ಸದನವು॥ ಎನಿತು ರಮ್ಯವನಿತು ಸೌಮ್ಯ ನಿನ್ನ ತಪೋಭವನವು ॥೬॥

ನಳಿನಮುಖಿಯರಪ್ಸರೆಯರು ಗಾನರಸವ ಸುರಿವರು। ಉಲಿದು ನಿನ್ನ ಕೀರ್ತನೆಗಳ ನಲಿಯುತ ಮೈಮರೆವರು॥ ಎಲ್ಲೆಡೆಯಂ ನೋಡಲಲ್ಲಿ ಅಮರ ನರಸಮೂಹದಲ್ಲಿ। ಪೊಣ್ಮುವ ಜಯಘೋಷದಲ್ಲಿ ಸಕಲವಾದ್ಯ ಮೊರೆವವು॥ ನಿನ್ನ ಗುಣವ ನಿನ್ನ ಘನವ ಸರ್ವಲೋಕಕ್ಕೊರೆವವು ॥೭॥

ನಿನ್ನ ಯಶಗಳನ್ನು ಭುವಿಗೆ ಸಾರುತಿರುವ ಢಕ್ಕೆಯೂ। ನಿನ್ನ ಕೀರ್ತಿಲೋಕ ಪೂರ್ತಿ ತೋರುತ್ತಿರುವ ಟೆಕ್ಕೆಯೂ॥ ಪಾಲುಗಡಲಿನ ಲೆಗಳೆಸಲು ಡಾಳಿಸುತಿಹ ಚಾಮರಗಳು। ಮೇಲೆ ಮೂರು ಬೆಳ್ಗೊಡೆಗಳು ಭಾಮಂಡಲ ಕಿರಣವು॥ ಮುಕ್ತಿಪುರವ ಮುಟ್ಟುವುದೆನೆ ನಿತ್ತ ಮಾನಸ್ತಂಭವು ॥೮॥

ಜೈನಮತದ ಭಾಗ್ಯ ಚಂದ್ರ ಕಾವ ಯೋಗಿವರ್ಯರ। ದಿವ್ಯಧ್ವನಿಯ ಮೊಳಗಿಸುತ್ತ ನಿತ್ಯ ಪೊರೆವ ಭವ್ಯರ॥ ನರನಿಳಿಂಪ ಕಿನ್ನರರ ಗರುಡರಾ ಗಂಧರ್ವರ। ಉರಗ ಖಚರ ಕಿನ್ನರ ಕಿಂಪುರುಷರ ಜ್ಯೋತಿಷ್ಕರ ॥ ಜೀಯ ನಿನ್ನ ಭಜಿಪ ಯಕ್ಷರಾಕ್ಷಸಾದ್ಯರೆಲ್ಲರ ॥೯॥

ತಮ್ಮೊಳಿರುವ ದ್ವೇಷವಳಿದು ಸ್ನೇಹದಿಂದ ಕಳೆವವು। ಮೃಗದ ಜಾಲ ಖಗದಜಾಲ ಪ್ರಾಣಿಮಾತ್ರವೆಲ್ಲವು॥ ನಿನ್ನ ನುಡಿಯನಾಲಿಸುತಲಿ ಕಣ್ಣನೆತ್ತಿ ಈಕ್ಷಿಸುತಲಿ। ತನುವ ಮರೆದು ಲೀನತೆಯಲಿ ನಿನ್ನ ಬಳಿಯೊಳಿರುವುವು॥ ಆವ ವಶ್ಯ ಮಂತ್ರಶಕ್ತಿ ದೇವ ನಿನ್ನೊಳಿರುವುದೊ ॥೧೦॥

ಧೈರ್ಯದಿಂದ ಸ್ಥೈರ್ಯದಿಂದ ಮುರಿದೆ ಜವನ ದರ್ಪವಂ। ಶೌರ್ಯದಿಂದ ಸತ್ವದಿಂದ ತರಿದೆ ನೀ ಕಂದರ್ಪನಂ ॥ ಎನಿತೊ ಹಲವು ಜನ್ಮದಿಂದ ಪೊರ್ದಿದ ದುಷ್ಕರ್ಮದಿಂದ। ತೊಳಲಿ ಭವದಿ ಬಳಲಿಬಂದ ಎನ್ನನೆತ್ತಬಾರೆಯಾ॥ ನೀನು ಪೋದ ಪಥವನೆನಗೆ ತೋರಿ ನಡೆಸಲಾರೆಯಾ ॥೧೧॥

ಆಸಮಧರ್ಮವೆಂಬ ವೃಷ್ಟಿ ವಸುಧೆಗೆಲ್ಲ ಸುರಿಸಿದೆ। ಹೊಸತು ಚೇತನವನು ತುಂಬಿ ಭವ್ಯರನುದ್ಧರಿಸಿದೆ॥ ಧರ್ಮಚಕ್ರವನ್ನು ಧರಿಸಿ ಕರ್ಮವೈರಿಗಳನು ಜಯಿಸಿ। ನಿರ್ಮಲಾತ್ಮಯೋಗವೆರಸಿ ಮುಕ್ತಿಸತಿಯನೊಲಿಸಿದೆ॥ ನಿನ್ನ ಚರಣವನ್ನು ಸ್ಮರಿಪೆ ಎನ್ನ ಪೊರೆ ದಯಾನಿಧೇ ॥೧೨॥

ಶ್ರೀ ಜಿನಸ್ತುತಿ

ರಾಗ—ಜಂಜೂಟಿ

ಆದಿತಾಳ

(ಕಲಿಯುಗದಲಿ ಹರಿನಾಮವ....ಎಂಬಂತೆ)

ಭವವಿಜಯನೆ ತವ ನಾಮವ ನೆನೆದರೆ। ಭವಬಾಧೆಗಳು ಪೀಡಿಸವೋ ಜಿನ ॥ಪ॥ ಭವವನು ಗೆಲಿದೆ ಜವನನು ತುಳಿದೆ। ಶಿವಪದವಿಯನು ನೀನಾಳಿದೆಯೋ ಜಿನ ॥೧॥

ಮುಕುತಿಯ ಪಡೆಯೆ ಯುಕುತಿಯನರಿಯೆ ಭಕುತಿಯನೊಂದನೆ ತಿಳಿದಿಹೆನೋ ಜಿನ। ಸುಖಕರವೆನುವ ಮುಕುತಿಯ ಪಥವ। ಭಕುತರಿಗೊಲಿದು ನೀ ತೋರಿ ಸಲಹು ಜಿನ ॥೨॥

ಹೃದಯವೆ ಸುಮನ ಭಕುತಿಯೆ ಚಂದನ। ಇದಕೋ ನಿರ್ಮಲ ಪ್ರೇಮದಾರತಿ ಜಿನ ॥ ಮದನನ ಮುರಿದ ಮದವನೆ ಸದೆದ ಸದಮಲಗುಣಿ ತವಪದವ ಪೂಜಿಪೆ ಜಿನ ॥೩॥

ಶ್ರೀ ಪರಂಜ್ಯೋತಿಸ್ತುತಿ

ರಾಗ-ಜಂಜೂಟಿ

ಆದಿ–ಏಕತಾಳ

(ಬ್ರೂಹೀ ಮುಕುಂದೇತಿ....ಎಂಬಂತೆ)

ಪಾಹಿ ಪರಂಜ್ಯೋತಿ ಪರಮಾ। ಪಾಹಿ ಪರಂಜ್ಯೋತಿ ಪರಮಾ ॥ಪ॥ ಪಾವನಮೂರುತಿ ತವಪದ ಭಕುತಿ। ಕಾವುದು ಭವ್ಯರಿಗೀವುತ ಮುಕುತಿ ॥೧॥

ದೀನರ ಪೊರೆಯೋ ಸದಾ ದಯದಲಿ। ಜ್ಞಾನಸುಧಾರಸ ಪಾವನಗೊಳಿಸಿ ॥೨॥

ಎನ್ನ ಮನವು ನಿನ್ನ ಧ್ಯಾನದೊಳ್ ನೆಲಸಲಿ ! ಎನ್ನ ಹೃದಯ
ಚಿರಶಾಂತಿಯ ಪಡಲಿ ॥೩॥

ರಾಗ—ಶುದ್ಧಸಾವೇರಿ ಏಕತಾಳ

(ನಿಜಮಾನವನಂ ನಾ ಸಖಿಯೇ ....ಎಂಬಂತೆ)

ಜಿನನಾಮ ರಸಾಯನ ಪಾನ ..। ದಿನ ಸೇವಿಸಿ ಸುಖಿಯಾಗೋ ಓ ಮನ ॥ಪ॥ ಭವವನು ಹರಿವಾ ಭಾಗ್ಯವ ಕೊಡುವ । ಶಿವಸುಖ ಸಂಪದವ..ನೀವಾ ॥ ಅ. ಪ. ॥ ಸ್ವಾದಿಸಲಘದಾ ಬಾಧೆಯ ಕಳೆವ। ಬೋಧಾನ್ವಿತ ಶ್ರೀ ಲೀಲಾಮಯನ ॥೧॥

ಮೌನಿಜನಾಂಗ ಧ್ಯಾನವ ಗೈವ। ದೀನಾಶ್ರಯನಾ ನೆನೆಯೋ ಓ ಮನ ॥೨॥

⚬⚬

(ಪ್ರಭು ನನ್ನೆದೆಯಾ ನಿನ್ನಯಾ ... ಎಂಬಂತೆ)

ಪರಮಾತ್ಮ ಪರ-ಬ್ರಹ್ಮ ಪರಂ-ಜ್ಯೋತಿ ಶ್ರೀಕರ ।
ಎನ್ನದೆಯ ಬೆಳಗು ಬಾ ಜ್ಞಾನಭಾಸ್ಕರ।
ನೀನೇ ಸಾಕಾರ ನೀ ನಿರಾಕಾರ। ನಿನ್ನಯ ಧ್ಯಾನವೇ ಎನಗಾಧಾರ।
ತವಸಾರ ಸೌಂದರ್ಯವ ತೋರೆನಗೆ।
ಜನ್ಮಜರಾ ಮರಣ,ರೋಗಹರ ದಯಾ ಧರ್ಮಧರಾ।
ಚಿನ್ಮಯಾಂಗ ಚಿತ್‌ಸ್ವರೂಪ ಶಾಂತಸಾಗರ।
ಎನ್ನೆದೆಯ ಬೆಳಗು ಬಾ ಜ್ಞಾನಭಾಸ್ಕರ ॥೧॥
ನೀ ಧ್ಯಾನಗಮ್ಯ ನೀನೆ ಸೌಮ್ಯ। ನಿನ್ನ ಸ್ವಭಾವವೆ ಚೈತನ್ಯಜ್ಞಾನ।
ನಿನ್ನ ಸಂದರ್ಶನಭಾಗ್ಯವ ನೀಡೆನಗೆ।
ಮನದ ಕದ ತೆರೆದು ನಿನ್ನ ಸದಾ ನೆನೆದು ಕರೆವೆನಿದೊ।
ಚಿದಾನಂದರೂಪದೋರು ಹೇ ದಯಾಕರ।
ಎನ್ನೆದೆಯ ಬೆಳಗು ಬಾ ಜ್ಞಾನಭಾಸ್ಕರ ॥೨॥

ಶ್ರೀ ಆದಿನಾಥಸ್ವಾಮಿಸ್ತುತಿ

ರಾಗ-ಮೋಹನ ಆದಿತಾಳ

(ಘನಶ್ಯಾಮಸುಂದರಾ .. ಎಂಬಂತೆ)

ಘನಶಾಂತಸಾಗರ.. ಶ್ರೀಕರ..ಕರುಣಾಮಯಶೀಲಾ .. ॥ಪ॥
ಸುರನರತತಿಮಣಿಮೌಲೀ .. ಮಣಿಮೌಲಿ। ಪರಿಶೋಭಿತ ನಖ
ಜಾಲಾ ॥ಅ. ಪ.॥
ಅಹಿಂಸಾಧರ್ಮ ಪ್ರಚಾರಮಾಡಿ .. ಅಜ್ಞಾನವ ದೂಡಿ .. ।
ನಾಡೊಳೆಲ್ಲ ನವಶಾಂತಿ ನಿರ್ಮಿಸಿ ಸ್ವಾರ್ಥವ ನೀ ಬಿಡಿಸಿ.. ॥
ಸತ್ಯಮಾರ್ಗವ ತೋರ್ದೆಯಾ ಜಿನ ಜನಗಣಪರಿಪಾಲಾ .. ॥೧॥
ಅನಂತಜ್ಞಾನ ಪ್ರಭಾವಿಲೋಲಾ . . ಕುಮತಿತಿಮಿರಕಾಲಾ .. ।
ಸಾರಿ ತತ್ತ್ವಮಯ ಶಾಸ್ತ್ರಲೋಕದಿ ಧೀರನು ನೀನೆನಿಸಿ .. ।
ಅಕ್ಷಯಾದಿನಾಥನಾದೆಯಾ ಶಿವಸುಖಮಯಲೀಲಾ .. ॥೨॥

⚬⚬

ಶ್ರೀ ಮಹಾವೀರಸ್ವಾಮಿಸ್ತುತಿ

ರಾಗ—ಖರಹರಪ್ರಿಯ ಆದಿತಾಳ

(ರಘುಪತಿ ರಾಘವ ರಾಜಾರಾಂ..ಎಂಬಂತೆ)

ಯತಿಪತಿಸೇವಿತ ಶ್ರೀಚರಣಾ। ಹಿತೋಪದೇಶಕ ವೀರಜಿನ ॥ಪ॥
ಪರಹಿತ ಚರಿತಾನಂತಗುಣಾ । ಪತಿತಪಾವನ ಶ್ರೀರಮಣ ॥೧॥
ಜಿನಮತವರ್ಧಕ ದಿವ್ಯಗುಣಾ। ಮಹಾಮಹಿಮ ಮಹಾವೀರಜಿನ॥
ಸನ್ಮತಿದಾಯಕ ತವಚರಣಾ। ಸದಾಸ್ಮರಿಪೆ ಕೊಡು ತ್ರೈರತುನ ॥೨॥

⚬⚬

ರಾಗ ಆದಿತಾಳ

(ತನು ಡೋಲಿ ಮೇರೆ ಮನ ಡೋಲೆ..ಎಂಬಂತೆ)

ಜಿನ ಮಹಾವೀರ। ಗುಣಗಣಸಾರ। ಭವದ ಸಮುದ್ರಪಾರ-ಧೀರ
ಜ್ಞಾನಪ್ರಭಾಮಯ ಭಾಸುರ ॥ಪಲ್ಲ॥

ದ್ಯುಮಲ. ಮಧುರ ವಚನಾಮೃತಧಾರಾ ಸುರಿಸುತ ಸಜ್ಜನರ।
ಹೃದಯಕೆ ನವಚೇತನವನು ತುಂಬಿದ ಭವ್ಯಜನೋದ್ಧಾರ।
ಮದದೂರ। ಉರುತರ ಘೋರ।
ಮದದಪಕಾರ ವಿದಾರಶೂರ। ಶಾಂತಸುಧಾಕರ ಶ್ರೀಕರ ॥೧॥
ಕುಂಡಪುರದ ಸಿದ್ಧಾರ್ಥನೃಪಾತ್ಮಜ। ತ್ರಿಶಲಾಂಬೆಯ ಬಾಲ।
ದಂಡಿಸಿ ದೇಹ ಖಂಡಿಸಿ ಕರ್ಮವ ಹರಿದೆ ಮೋಹನಜಾಲ ।
ಪಂಡಿತಲೋಲ । ಪಾವನಶೀಲ ಪರಮಪ್ರಶಾಂತ ವಿಚಾರನಿಲಯ ।
ಪರಹಿತಚರಿತ ಕೃಪಾಲಯ ॥೨॥

ಶ್ರೀ ಜಿನಭಜನೆಯ ಮಾಡೋ

ರಾಗ — ಆದಿತಾಳ

(ಜಾಯೆ ತೊ ಜಾಯೆ ಕಹಾಂ.. ಎಂಬಂತೆ)

ಜಿನಭಜನೆಯ ಮಾಡೊ ಕೊಂಡಾಡೊ.. ।
ಚಿನುಮಯನಾ.. ಗುಣಗಣದಾ.. ಮಹಿಮೆಯ ಪಾಡೊ.. ॥
ಕೊಂಡಾಡೊ.. ಚಿನುಮಯನಾ.. ॥ಪ॥
ಓ ಮರುಳ್ಮವನೆ ನೀನೆನ್ನ ಮರೆವೆ.. ।
ಮೋಹದ ಪಾಶಕೆ ಬಲಿಯಾಗುತಿರುವೆ॥
ಮೋಹೋರಗಾರಿ ಮಂತ್ರವ ಜಪಿಸೋ.. ॥೧॥
ಕಾಮಮದಾಂತಕ ಕಲಿಮಲ ಹರಣ.. ।
ದೀನಜನೋದ್ಧಾರ ಮುಕುತಿಯ ರಮಣಾ ॥
ಆ ಮಹಾಮಹಿಮನ ನಾಮವ ಸ್ಮರಿಸೊ.. ॥೨॥
ಕಾಲವಿಜೇತನ ಲೀಲೆಯ ಕಥನ.. ।
ಪೇಳದದೇತಕೇ ತಾಳಿಹೆ ಮೌನ ॥
ನಾಲಿಗೆ ನುಡಿಯೋ ಜಿನಗುಣ ಸ್ತವನ.. ॥೩॥
ಓ ಜೀವ ನಿನ್ನ ಜವನೆಳೆವನ್ನ..

ಕಾಯುವರನ್ಯರಾರಿಲ್ಲವಣ್ಣಾ ॥
ಶ್ರೀಜಿನಚರಣಾ ಮಹಿಮೆಯ ಪಾಡೊ.. ॥೪॥
ಸಂಸಾರ ಘೋರ ಸಂತಾಪದೂರ.. ।
ಹಿಂಸೆಯ ನಿಲಿಸಿದ ಕರುಣಾವತಾರ ॥
ಶಾಂತಿಪ್ರಸಾರನ ಸಂತತ ಭಜಿಸೊ.. ॥೫॥

ಮನವ ಬೆಳಗಲಿ

ರಾಗ—ಮೋಹನ — ರೂಪಕತಾಳ

(ಹರಿಯೆ ನಿನ್ನ ಸ್ಮರಣೆಯನ್ನು ಮರೆಯಲಾರೆನು... ಎಂಬಂತೆ)

ಅರುಹ ಶಾಂತಿ ಜಿನರ ಚರಣ ಸರಸಿಜಾತಕೆ ।
ಹರುಷದಿಂದ ಆರತಿಯನು ಬೆಳಗಿ ಪಾಡುವೆ ॥ಪ॥
ಹೃದಯದೊಳಗೆ ಭಕುತಿಯೆಂಬ ದಿವ್ಯಜ್ಯೋತಿಯ ।
ಮುದದಿ ಬೆಳಗಿ ಮದವ ತುರಿದ ಸವಮಲಾಂಗಗೆ ॥
ಸಿರಿಯ ಮೋಹ ತೊರೆದು ಲೋಕಪೂಜ್ಯನಾದಗೆ ॥೧॥
ಭವಸಮುದ್ರದೊಳಗೆ ಮುಳುಗಿ ತೊಳಲಿ ಬಳಲುತ ।
ಬವಣೆಬಡುವ ಜೀವಿಗಳನು ಪಾರಗೊಳಿಸಿದ ॥
ಜ್ಞಾನಮಯನ ಧ್ಯಾನ ಎನ್ನ ಮನವ ಬೆಳಗಲಿ ॥೨॥

॥ ನಾನಿನ್ನ ಬೇಡುವೆ ॥

ರಾಗ (ಪ್ರಭು ನನ್ನೆದೆಯ ನಿನ್ನಯಾ.... ಎಂಬಂತೆ) ಆದಿತಾಳ

ಭವಸಾಗರವ ದಾಟಿಸುವ ಮಹಾನಾವಿಕ ।
ನಾ ನಿನ್ನ ಬೇಡುವೆ ಜಿನನಾಯಕ । ಓ..., ಜಿನನಾಯಕ ॥ಪ॥
ಸಂಸಾರಘೋರ ಸಂತಾಪದೂರ ।

ಹಿಂಸಾನಲಕೆ ನೀ ವಾರಿಧಾರಾ ॥
ಸಂತತಾನಂದಮಯ ಸರ್ವಶಕ್ತಿನಾಯಕ ।
ಚಿಂತೆಗಳ ನೀಗಿಸೈ ಅನಂತಜ್ಞಾನದೀಪಕ ॥
ಸ್ಮರವಿಜಿತ ದಯಾಭರಿತ ।
ವಿಶ್ವಶಾಂತಿ ಪಾಲಿಸೈ ಅಹಿಂಸಾಧರ್ಮಬೋಧಕ । ಜಗದೋದ್ಧಾರಕ ॥
ನಾ ನಿನ್ನ ಬೇಡುವೆ ಜಿನನಾಯಕ । ಓ. . . ಜಿನನಾಯಕ ॥೧॥

ಧ್ಯಾನಾಗ್ನಿಯಿಂದ ಘನಘಾತಿಕರ್ಮ ।
ಕಾನನವ ದಹಿಸಿದ ಕೇವಲಜ್ಞಾನ ॥
ಭಾನುತೇಜ ನಿನ್ನ ಪಾದ ಧ್ಯಾನಗೈವ ಸರ್ವದಾ ।
ಕಾಣಿಸು ಅಜ್ಞಾನ ತಮವ ಹರಿಸಿ ಮೋಕ್ಷಸಂಪದಾ ॥
ಮಮ ಮನದ ಮಂದಿರವ ।
ಬೆಳಗು ಜ್ಞಾನದೀಪ್ತಿಯಿಂದ ದಿವ್ಯಪಥಪ್ರದರ್ಶಕ । ಸುಖದಾಯಕ ॥
ನಾ ನಿನ್ನ ಬೇಡುವೆ ಜಿನನಾಯಕ । ಓ. . . ಜಿನನಾಯಕ ॥೨॥

●●

ಧನ್ಯನಾಗಿಕೊ

ರಾಗ-ಮೋಹನ — ರೂಪಕತಾಳ

(ಹರಿಯೆ ನಿನ್ನ ವಿರಸಭಾವ. . . .ಎಂಬಂತೆ)

ನೀನು ನಿನ್ನ ಮನದ ಮುಕುರವನ್ನು ನೋಡಿಕೊ ।
ನಿನ್ನೊಳಿರುವ ಕುಂದುಕೊರತೆಗಳನು ತಿದ್ದಿಕೊ ॥ಪ॥
ಕ್ರೋಧ ಮಾನ | ಮಾಯಾ ಲೋಭ ಮದವು ಮತ್ಸರ ।
ಆದಿ ದುರ್ವಿಕಾರಭಾವ ಮಲಿನ ತೊಳೆದುಕೊ ॥
ಶೋಧಿಸುತಲಿ ನಿನ್ನ ನಿಜಸ್ವಭಾವವರಿತುಕೋ ॥೧॥

●●

ಅರಹಂತರ ಸ್ತುತಿ

ಜ್ಯೋತಿ ಬೆಳಗುತಿರಲಿ . . . ಹೃದಯಾಂಬುಧಿಯಲಿ
ಚಿನುಮಯರೂಪನಾ . . . ಪ್ರಭೆ ಬೀರುತಲಿರಲೀ ॥ಪ॥
ಮನವನು ಮುಸುಕಿದ ಕತ್ತಲೆ ಸರಿಯಲಿ ।
ಜ್ಞಾನದ ಕಿರಣವು । ಸೂಸುತಲಿರಲೀ
ಶುಭ ಭಾವನೆ ಬರಲೀ ಜ್ಯೋತಿ ॥೧॥
ಮಾನವನೆದೆಯಲಿ । ಪರರನು ಪೀಡಿಪ
ಭಾವನೆ ಎಂದಿಗೂ ಬಾರದೆ ಇರಲಿ
ದಯ ಭಾವ ಬರಲೀ . . ॥೨॥
ಜಗದಲಿ ತುಂಬಿದ । ಸ್ವಾರ್ಥತೆಯಳಿಯಲಿ
ದ್ವೇಷಾಸೂಯೆಯು । ತೊಲಗುತಲಿರಲಿ
ತ್ಯಾಗ ಭಾವ ಬರಲಿ ॥೩॥
ಹೃದಯದ ವೀಣೆಯು ನುಡಿಯುತಲಿರಲಿ
ಓಂಕಾರ ಧ್ವನಿ ಘೋಷಿಸುತಿರಲಿ
ಲೋಕವನೆಬ್ಬಿಸಲಿ . . . ॥೪॥
ಮನೆ ಮನೆಗಳಲಿ ಎಲ್ಲರ ಮನದಲಿ ।
ಧರ್ಮೋತ್ಸಾಹವು ಹೆಚ್ಚುತಲಿರಲಿ ।
ನಿನ್ನಯ ಧ್ಯಾನದಲಿ . . . ನಿನ್ನಯ ಧ್ಯಾನದಲಿ ॥೫॥

●●

ಮೋಕ್ಷಪತೇ

(ಸೀತಾಪತೇ ನಾಮನಸನಾ ಎಂಬಂತೆ)

ಮೋಕ್ಷಪತೇ ಪಾವನಗುಣಾ । ಮೋಕ್ಷಪತೇ
ಸಿದ್ಧಾರ್ಥಸೂನು । ತೀರ್ಥೇಶ್ವರಾ
ಸಾರಾತ್ಮಕಾ । ಸರೋಜಾಕ್ಷನೇ ।
ವೀರನಾಥಮೌನಿ ವಾರವಿನೂತ ॥೧॥

ಭವಭಂಜನಾ ತ್ರೈಭುವನೈಕ ವೀರಾ
ದಿವಿಜವಿನುತ ದಿವ್ಯ ಸುಬೋಧ ।
ಕಾಲಾಂತಕಾ ಕಲಿಲ ವಿಜೇತಾ ।
ಕಾಮ ಕರ್ಮನಾಶ ಕಾಯೋ ಜಿನೇಶಾ ॥೧॥

ಂಂ

ಮತಿಯ ಪಾಲಿಸೋ

ಮಾಂಟುರಾಗ-ಆದಿತಾಳ

(ಮಂಗಲಮಯ ನಾಮತುಜೆ ಸತತ ಗಾವ್ಯದೈ ಎಂಬಂತೆ)

ಮಂಗಲಮಯ ನಾಮ ಎನ್ನಾ । ಸತತ ಪಾಲಿಸೋ ।
ಭೀಕರ ಮೋಹಾರಣ್ಯದಿ ।
ಆಶಾಮಯ ಕಂಟಕದಿ ।
ಬಸವಳಿದೆನು ಜಪದೊಳೆನಗೆ
ದಾರಿ ತೋರಿಸೋ ॥ ಮಂಗಲ ॥೧॥

ಕಾಡುವ ಮಮ ದುಷ್ಕರ್ಮದ ।
ಬೇಡಿಯ ನೀ ಪರಿಹರಿಸುತ ।
ಮೂಢಾಂಧತೆ ಕೆಡಿಸಿ ಜ್ಞಾನ।
ಜ್ಯೋತಿ ಬೆಳಗಿಸೋ ॥ಮಂಗಲ ॥೨॥
ಪರಿ ಭ್ರಮಿಸುತ ಭವ ಭವದಲಿ ।
ಜನ್ಮಜರಾ ಬಾಧೆಯಲಿ ॥
ತಿರುತಿರುಗುತ ಬಳಿಸೇರಿದೆ ।
ಪೊರೆಯ ಲಾಲಿಸೋ ॥ಮಂಗಲ ॥೩॥
ಸಂಸಾರಾರ್ಣವ ಜಲದಲಿ ।
ತಾಪತ್ರಯವಲೆಗಳಲಿ॥
ಮುಳುಗೇಳುವ ಮಮನಾವೆಯ ।
ದಡವ ಹಾಯಿಸೋ ॥ಮಂಗಲ ॥೪॥

ಂಂ

ಪಾಹಿಪರಂಜ್ಯೋತಿ ಪರಮಾ

(ಬ್ರೂಹಿ ಮುಕುಂದೇತಿ ಎಂಬಂತೆ)

ಪಾಹಿ ಪರಂಜ್ಯೋತಿ ಪರಮಾ ।
ಪಾಹಿ ಪರಂಜ್ಯೋತಿ ಪರಮಾ । ಪಾಹಿ ಪರಂಜ್ಯೋತಿ ॥ಪ॥
ಪಾವನ ಮೂರುತಿ । ತವಪದ ಭಕುತಿ
ಕಾವುದು ಭವ್ಯರಿಗೀವುತ ಮುಕುತಿ ॥೧॥
ದೀನರ ಪೊರೆಯೂ ಸದಾ ದಯದಲಿ
ಜ್ಞಾನ ಸುಧಾರಸ ಪಾನವಗೊಳಿಸಿ ॥೨॥
ನಿನ್ನಯ ಧ್ಯಾನದೊಳೇ ನೆಲಸಲಿ
ಎನ್ನ ಹೃದಯಂ ಚಿರಶಾಂತಿಯ ಪಡಲಿ ॥೩॥

ಂಂಂ

ಜೈನ ಪ್ರಮುಖರ ಕರ್ತವ್ಯ

ವಂದಿಪೆನಾದಿ ಜಿನೇಂದ್ರನ ।
ಕಂದನ ಮಹೋನ್ನತನ ನಿತ್ಯಾನಂದನ ನೊಲವಿಂ ।
ವಂದಿಪೆ ಭವಭಯ ದೂರನ ।
ವಂದಿಪೆ ಶ್ರೀ ಗೊಮ್ಮಟೇಶನಡಿಗಳ ಮುದದಿಂ . ॥೧॥
ಧರ್ಮವೆ ಸದ್ಗತಿಕಾರಣ ।
ಧರ್ಮವೆ ಕರ್ಮಾದ್ರಿಚೂರ್ಣ ಕುಲಿಶಾಯುಧತಾಂ ॥
ಧರ್ಮೋತ್ಸಾಹದಿ ಸರ್ವರು ।
ಧರ್ಮೋನ್ನತಿಗಳಿಸಲದರಿಂ ಕೊರತೆಯೆ ಜಗದೊಳ್ ॥೨।
ಜಿನಮುಖಕಮಲವಿನಿರ್ಗತ ।
ಘನತರ ತತ್ವಗಳನೊಲ್ದು ವಿಸ್ತಾರದೊಳುಂ॥
ಅನುಪಮಕೃತಿಗಳ ರೂಪದಿ ।
ಜನರರಿವೋಲ್ ಬರೆದರೈಸೆ ಮುನಿಪುಂಗವರು ॥೩
ಅಂದಿನ ಕವಿಕುಲತಿಲಕರ ।

ಕುಂದದ ಸಾಹಸದ ಫಲದೊಳಿಂದೀ ವರೆಗುಂ॥
ಅಂದಿನ ಮಹ ಮಹಪುರುಷರ।
ಬಂಧುರಚರಿತೆಗಳ ನೋಡಿ ಮುದವಡೆಯುವೆವೈ ॥೪॥
ಹಲವರ್ ಸಂಸ್ಕೃತ ಪ್ರಾಕೃತ।
ಪಳಗನ್ನಡದಿಂ ಪಲರ್ ಸತ್ಕಾವ್ಯಗಳಂ ॥
ತಿಳಿವಂದದಿ ಬರೆದಿರ್ಪರು।
ಅಳಿಯದ ಸತ್ಕೀರ್ತಿಗಳಿಸಿ ಮೆರೆದರ್ ಜಗದೊಳ್ ॥೫॥
ಅದರಿಂದಾ ಸದ್ಧರ್ಮವ।
ಬದಿಗೊತ್ತದೆ ಸಕಲಬಂಧು ಭಗಿನಿಯರೆಲ್ಲರ್ ॥
ಅದರ ಪ್ರಭಾವನೆಗೆಯ್ಯಲು।
ಮುದದಿಂ ಮುಂಬರಿವುದೆಮ್ಮ ನಿಜಕರ್ತವ್ಯಂ ॥೬॥

(೧೯೪೦ರಲ್ಲಿ ಶ್ರವಣಬೆಳಗುಳದಲ್ಲಿ ಜರಗಿದ ಭಾರತವರ್ಷೀಯ ದಿಗಂಬರ ಜೈನಮಹಿಳಾ ಪರಿಷತ್ತಿನಲ್ಲಿ ಓದಿದುದು.)

ಶ್ರೀ ಮಹಾವೀರ ಸ್ತುತಿ ವೃತ್ತ

ಶ್ರೀ ವೀರಂ, ಕರುಣಾಕರಂ ಪಡೆದೆ ನೀ ಶ್ರೀ ಪಂಚ ಕಲ್ಯಾಣವಂ ।
ಕೈವಲ್ಯಂ ಪದವೇರಿನಿಂದ ಮಹಿಮಂ ಸುಜ್ಞಾನ ಸಂಪೂರ್ಣನು ।
ದೇವಂ ದೇವರ ದೇವನೆಂಬ ಬಿರುದಂ ತಾಳ್ದ ತಪೋತೇಜದಿಂ ।
ಸಾವಂ ಸುಟ್ಟಿಹ ಸ್ವಾಮಿಯೆನ್ನ ಸಲಹೈ ಓ ವೀರ ತೀರ್ಥೇಶ್ವರಾ ॥೧॥
ಶ್ರೀ ಸಿದ್ಧಾರ್ಥ ನೃಪಾಲ ನಿನ್ನ ಜನಕಂ ನೀನೇ ತ್ರಿಲೋಕೇಶ್ವರಂ ।
ಹೆಸರೇಂ ನಿನ್ನದು ವರ್ಧಮಾನ ಜಿನಪಂ ಸದ್ಧರ್ಮ ಸಂವರ್ಧಕಂ ।
ತ್ರಿಶಲಾದೇವಿ ಕುಮಾರ ನಿನ್ನ ಚರಣಂ ಭಕ್ತಾದಿಗಳ್ಗಾಶ್ರಯಂ ।
ಅಸಮಾನ ಸ್ಥಿರಭಾವಮಂ ಕರುಣಿಸೈ ಓ ವೀರ ತೀರ್ಥೇಶ್ವರಾ ॥೨॥

ಕೃತಕರ್ಮೋತ್ಕರಪಾಕದಿಂ ಮರೆತೆ ನಾ ಸದ್ದರ್ಶನ ಜ್ಞಾನಮಂ ।
ಪ್ರತಿನಿತ್ಯಂ ಅನುಭೋಗಿಸುತ್ತಲಿರುವೆಂ ಸಂಸಾರದಾ ದುಃಖಮಂ ।
ಕ್ಷಿತಿಯೊಳ್ಪೂಜ್ಯನೆ ಎನ್ನ ರಕ್ಷಿಪ ಮಹಾ ನಿಸ್ವಾರ್ಥ ನೀನೋರ್ವನೇ।
ಅಸಮಾನ ಸ್ಥಿರಭಾವಮಂ ಕರುಣಿಸೈ ಓ ವೀರ ತೀರ್ಥೇಶ್ವರಾ ॥೩॥

ಶ್ರೀ ಅನಂತನಾಥ ಸ್ವಾಮಿ ಸ್ತುತಿ

(ಶ್ರೀಮದನಂತ ತೀರ್ಥಂಕರ ಎಂಬಂತೆ)

ನಮೋ ಜಿನಮುನಿನುತ। ನಮೋ ಶ್ರೀ ಧರಾರ್ಚಿತ। ನಮಿಸುವೆ ತವ
ಪದ ಕಮಲಕೆ ನಿರತಾ ॥ಪ॥ ಯಮವ್ರತ ಪಿಡಿದೆ। ಕ್ಷಮೆಯನು ತಳೆದೆ
ಸಮವಸರಣದಿ ವಿ। ರಾಜಿಸಿ ಮೆರೆದೆ। ಸುಮನ ಬಾಣವ। ವಿನಾಶಗೊಳಿ
ಸಿದೆ। ಭ್ರಮೆಯ ತೊರೆದು ಕೇವಲ ಪಡೆದೆ। ವಿಮಲರೂಪನೆ ಮುಕ್ತಿ
ರಮೆಯ ವರಿಸಿದೆ ॥೧॥

ಜಗದ ಗುರುವರ । ಅಗಣಿತ ಶೂರ । ಮಿಗಿಲೆನಿಸುವ ಸಂ ।
ಸಾರ ವಿದೂರ ॥ ಪ್ರಭುವೆ ನಿನ್ನ ಧ್ಯಾನಿಪ ಬಗೆಯೊಂದೇ । ಶುಭವ
ನೀಡುವುದು ನಿಶ್ಚಯವೆಂದೇ । ಬಗದಿಹೆ ತೋರು ಸನ್ಮತಿ ಪ್ರಭೆ
ಯೊಂದೇ ॥೨

ಪರಮಾತ್ಮನೀನೇ । ಪರಮ ಪಾವನನೇ । ಶರಣುಜನರನು
ಉ। ದ್ಧರಿಸುವ ನೀನೇ ॥ ಕರುಣಾಸಾಗರನೆ । ಪರಹಿತಚರಿತಾ ।
ಚರಣ ದರ್ಶನವನೀಡೆಂದೆನುತಾ । ಕರವ ಮುಗಿದು ಬೇಡುವೆವೀರ
ನಾಥ ॥೩॥

ಶ್ರೀ ಶಾಂತಿನಾಥನ ಸ್ತುತಿ

(ಜಯಲೀಲಾಭರಿತಾ ಎಂಬಂತೆ)

ಶ್ರೀ ಶಾಂತಿನಾಥಾ ಗುಣಾತೀತ ಸುರಪೂಜಿತ ಮುನಿಸನ್ನುತ ॥ಅ.ಪ॥
ಪಶುಪೂಜ್ಯರಿತ್ಯ, ದುರಿತವಿಜಿತ, ಕರುಣಾರಸಪರಿಪೂರಿತಾ ॥೧॥
ಯಮವಿನಾಶ, ದ್ಯುಮಣಿಭಾಸ ಸುಮನೋಹರಸುಖವಾಸ ॥೨॥

ಶ್ರೀ ಮಹಾವೀರ ಸ್ತುತಿ

(ತಾಯಿ ಬಾರೆ ಮೊಗದ ತೋರೆ ಎಂಬಂತೆ)

ವೀರ ವೀರ ದೇವ ಮಹಾವೀರನೆನ್ನ ಪೊರೆವುದೈ
ವೀರ ವೀರ ಜೈನ ಮತೋದ್ಧಾರನೆನ್ನ ಸಲಹುದೈ
ನಿನ್ನ ದಯಾಮೃತವ ಬಯಸಿ ।
ನಿನ್ನ ಚರಣತಲವ ನುತಿಸಿ ।
ನಿನ್ನ ದಿವ್ಯ ನಾಮ ಸ್ಮರಿಸಿ ।
ಎನ್ನ ಮನವ ನಲಿಸುವೆ ।
ದೃಢ ಭಕ್ತಿಯು ನವಶಕ್ತಿಯೊಳ್ನಿಜ ಮುಕ್ತಿಯು ಬೇಡುವೆ ॥೧॥

ಶ್ರೀ ವೀರಸ್ತವನ

(ಮತ್ತೇಭವಿಕ್ರೀಡಿತಂ)

ತೊರೆದೈ ರಾಜ್ಯದ ಭೋಗವಂ ತೊರೆದೆಯೈ ಸಂಸಾರ ಸೌಖ್ಯಂಗಳಂ।
ತೊರೆದೈ ಕಾಯದ ಮೋಹಮಂ ತೊರೆದೆನೀ ಸ್ವಾರ್ಥಾದಿಭಾವಂಗಳಂ
ಅರಿಷಡ್ವರ್ಗವಗೆಲ್ದೆ ನೀ ತಪದೊಳೇನಾನಿನ್ನ ಸಾಮರ್ಥ್ಯಮೋ ।
ಗುರುವೇ ರಕ್ಷಿಸೆನ್ನನನಘಾ ಶ್ರೀ ವೀರ ತೀರ್ಥೇಶ್ವರಾ ॥೧॥
ಬಲದಿಂ ಘಾತಿಯ ಖಂಡಿಸುತ್ತೆನಭದೊಳ್ ಚಂದ್ರಾರ್ಕಕೋಟಿ ಪ್ರಭಾ।

ವಿಲಸದ್ಭಾಸಿತನಾಗಿ ನೀಂ ಮೆರೆಯೆ ಪಂಚಾಶ್ಚರ್ಯವಾಗಲ್ಕೊಡಂ ।
ತಿಳಿದಾ ವ್ಯಂತರ ನಾಗನಾಕಪತಿಗಳ್ ತಾರಾಧಿಪರ್ ಬೇಗದಿಂ ।
ನಲವಿಂ ನಿನ್ನನು ಪೂಜಿಸಲ್ಕೊದಗಿದರ್ ಶ್ರೀ ವೀರ ತೀರ್ಥೇಶ್ವರಾ ॥೨॥
ಗರುಡರ್ ಕೀರ್ತಿಸೆ ವ್ಯಂತರರ್ ಪೊಗಳೆ ದೇವೇಂದ್ರಾದಿಗಳ್ ಪೂಜಿಸಲ್।
ಉರಗೇಂದ್ರಂ ಸ್ತುತಿಗೈಯಲಪ್ಸರೆಯರತ್ಯಾನಂದದೊಳ್ ನರ್ತಿಸು ॥
ತಿರೆ ಸದಾ ನವನೊಲ್ದು ಪಾಡುತಿರಲಾ ಗಂಧರ್ವರುತ್ಸಾಹದೊಳ್ ।
ಸುರಘಂಟಾರವ ಪೇಳ್ದುದೈ ಧರೆಗೆ ನೀಂ ಕೈವಲ್ಯಕೇದಾನಂದವಂ ॥೩॥
ಪೊಳಗಿತ್ತೊಯ್ಯನೆ ಲೋಕಮೆಲ್ಲ ಜಿನ ನಿನ್ನಾ ದಿವ್ಯ ವಕ್ತ್ರಾಬ್ಜದೊಳ್ ।
ಇಳೆಗಾ ಧರ್ಮದ ವೃಷ್ಟಿಯಂ ಕರೆದು ನೀಂ ಭವ್ಯಾತ್ಮರಂ ಕಾಯ್ದೆ ಶ್ರೀ ।
ನಿಲಯಾ ರಕ್ಷಿಸು ರಕ್ಷಿಸೆನ್ನನನಘಾ ಶ್ರೀ ವೀರ ತೀರ್ಥೇಶ್ವರಾ ॥೪॥
ಜಪತಾ ರ್ಝುಂಕಿಸಿ ಜನ್ಮವಂ ಜಯಿಸಿ ತ್ರೈಲೋಕ್ಯಾಗ್ರದೊಳ್ನಿಂದ ಶ್ರೀ ।
ಧವ ನಿನ್ನಂ ಸ್ತುತಿಗೈವೆನೆನ್ನ ಮನದೊಳ್ ಸದ್ಭಕ್ತಿಯೊಳ್ ನಿಚ್ಚಲುಂ।
ಭುವನಾಂಭೋಜ ದಿವಾಕರೋಪಮನೆ ನಾಂ ನಿನ್ನಂಘ್ರಿಯಂ ಸಾರ್ದೆನೀ ।
ಭವವಾರಾಶಿಯಿನೆತ್ತಿ ಕಾಯ್ವುದನಘಾ ಶ್ರೀ ವೀರ ತೀರ್ಥೇಶ್ವರಾ ॥೫॥

ಶ್ರೀ ಮಹಾವೀರ ಸ್ತವನ

ಸುರರು ವ್ಯಂತರ ಯಕ್ಷರಾಕ್ಷಸ। ಉರಗಪತಿ ಗಂಧರ್ವ ಜ್ಯೋತಿ।
ಷ್ಕರರು ತವ ಚರಣವನು ಪೂಜಿಸಿ ಭಕ್ತಿ ಭಾವದಲಿ॥ ನಿರುತ ಒದ
ಗುವರೆನಲು ಲೋಕದಿ। ಸರಿಯದಾರ್ಯ್ಯ ನಿನಗೆ ದೇವನೆ ಪರಮ
ಪುರುಷನು ನೀನೇ ಪೊರೆ ಮಹವೀರ ಜಿನರಾಜ ॥೧॥

ದೇವ ನೀನೇ ಭಕ್ತಜನ ಸಂಜೀವ ನೀನೇ ಮೂರುಲೋಕದ।
ಕಾವ ಕರುಣಾಕರನು ನೀನೇ॥ ಜೀವರಕ್ಷಕ ನೀನೆ ಮುನಿಜನ। ಕಾವ
ಲಂಬನ ನೀನೆ ರಕ್ಷಿಸು। ಭಾವ ಶುದ್ಧಿ ಬೇಡುವೆನು ಮಹವೀರ
ಜಿನರಾಜ ॥೪॥

ತೊರೆದೈ ರಾಜ್ಯದ ಭೋಗವಂ ತೊರೆದೆಯ್ಯೆ ಸಂಸಾರ ಸೌಖ್ಯಂ
ಗಳಂ। ತೊರದೈ ಕಾಯದ ಮೋಹಮಂ ತೊರೆದೆ ನೀಂ ಸ್ವಾರ್ಥಾ
ದಿಭಾವಂಗಳಂ । ಅರಿಷಡ್ವರ್ಗವಗೆಲಿದೆ ನೀ ತಪದೊಳೇನಾಧ್ಯಾನ ಸಾಮ
ರ್ಥ್ಯಮೋ । ಗುರುವೇ ರಕ್ಷಿಸು ರಕ್ಷಿಸೆನ್ನನನಘಾ ಶ್ರೀ ವೀರ
ತೀರ್ಥೇಶ್ವರಾ ॥೩

ಚಲದಿಂ ಖಾತಿಯ ಖಂಡಿಸುತ್ತ ನಭದೊಳ್ ಚಂದ್ರಾರ್ಕ ಕೋಟಿ
ಪ್ರಭಾ । ವಿಲಸದ್ಭಾಸಿತನಾಗಿ ನೀಂ ಮೆರೆಯೆ ಪಂಚಾಶ್ಚರ್ಯವಾಗ
ಲ್ಕೊಡಂ ॥ ತಿಳಿದಾ ವ್ಯಂತರ ನಾಗ ನಾಕಪತಿಗಳ್ ತಾರಾಧಿಪರ್ ಬೇ
ಗದಿಂ।ನಲವಿಂ ನಿನ್ನನ್ನು ಪೂಜಿಸಲ್ಕೊದಗಿರ್ ಶ್ರೀವೀರತೀರ್ಥೇಶ್ವರಾ॥೪॥

ಗರುಡರ್ ಕೀರ್ತಿಸೆ।ವ್ಯಂತರರ್ ಪೊಗಳೆ ದೇವೇಂದ್ರಾದಿಗಳ್ಪೂ
ಜಿಸಲ್। ಉರಗೇಂದ್ರಂ ಸ್ತುತಿಗೆಯ್ಯಲಪ್ಸರೆಯರತ್ಯಾನಂದದೊಳ್ನರ್ತಿಸು॥
ತ್ತಿರೆ ಸದ್ಗಾನವನೊಲ್ದು ಪಾಡುತಿರಲಾ ಗಂಧರ್ವರುತ್ಸಾಹದೊಳ್।
ಸುರ ಘಂಟಾರವ ಪೇಳ್ದುದೈ ಧರೆಗೆ ನೀಂ ಕೈವಲ್ಯಕೇರ್ದಂದಮಂ॥೫॥

ಮೊಳಗಿತ್ತೊಯ್ಯನೆ ದಿವ್ಯನಾದ ಜಿನ . ನಿನ್ನ ದಿವ್ಯ ವಕ್ತ್ರಾಬ್ಜ
ದೊಳ್। ಬೆಳಗಿತ್ತೊಯ್ಯನೆ ಲೋಕವೆಲ್ಲ ಜಿನ ನಿನ್ನಾ ದಿವ್ಯ ತೇಜತ್ವ
ದಿಂ॥ ಇಳೆಗಾ ಧರ್ಮದ ವೃಷ್ಟಿಯಂ ಕರೆದು ನೀಂ ಭವ್ಯಾತ್ಮರಂ
ಕಾಯ್ದೆ ಶ್ರೀ । ನಿಲಯಾ ರಕ್ಷಿಸು ರಕ್ಷಿಸೆನ್ನನನಘಾ ಶ್ರೀ ವೀರ
ತೀರ್ಥೇಶ್ವರಾ ॥೬॥

ಜವನಂ ಝಂಕಿಸಿ ಜನ್ಮಮಂ ಜಯಿಸಿ ತ್ರೈಲೋಕ್ಯಾಗ್ರ್ಯದೊಳ್ನಿಂದ
ಶ್ರೀ।ಧವ ನಿನ್ನಂ ಸ್ತುತಿಗೈವೆನೆನ್ನ ಮನದೊಳ್ ಸದ್ಭಕ್ತಿಯೊಳ್ನಿಚ್ಚಲುಂ॥
ಭುವನಾಂಬೋಜದಿವಾಕರೋಪಮನೆ ನಾಂ ನಿನ್ನಂಘ್ರಿಯಂ ಸಾರ್ದೆನೀ।
ಭವವಾರಾಶಿಯಿನೆತ್ತಿ ಕಾಯ್ವುದನಘಾ ಶ್ರೀವೀರತೀರ್ಥೇಶ್ವರಾ ॥೭॥

ನಿರ್ವಾಣ ಸ್ತುತಿ

"ವೀರಸ್ತವನ"

ಕೈವಲ್ಯಾಧಿಪನಾಗಿ ತಾಂ ಸುರಿಸುತಂ ಸದ್ಧರ್ಮ ಪೀಯೂಷಮಂ ।
ಭವ್ಯಾತ್ಮರ್ಕಳನೆಲ್ಲರಂ ತಣಿಸೆ ದೇವೇಂದ್ರಾದಿಗಳ್ ಸೇವೆಯಂ ।
ಗೆಯ್ಯಲ್ ಸರ್ವಹಿತಾರ್ಥಮಂ ನೆಗಳುತಂ ಸರ್ವಜ್ಞ ಸರ್ವೇಶ್ವರಂ ।
ದಿವ್ಯ ಶ್ರೀಯನುಪಾರ್ಜಿಸಲ್ಕೆಳಸಿದಂ ಶ್ರೀ ವೀರ ತೀರ್ಥೇಶ್ವರಂ ॥೧॥
ತೊರೆಯುತ ಸಮವಸರಣಮಂ ।
ಧರಣಿಯೊಳ್ಸಸವೆತ್ತ ಪಾವಾಪುರದೊಳು ತಪಮಂ ।
ಚರಿಸುತ ಕರ್ಮ ಕ್ಷಯದಿಂ ।
ವರಿಸಿದನಾ ಮುಕ್ತಿರಮೆಯಂ ವೀರಜಿನೇಶಂ ॥೨॥
ಕೊಡಲೆಮಗವರುತ್ತಮ ಮತಿ ।
ಕೊಡಲ್ಕೆ ಸದ್ಧರ್ಮವೆಂಬ ಯಾನವ ದಯೆಯಿಂ ॥
ತಡೆಯದೆ ಭವವಾರಾಶಿಯ ।
ದಡವಂ ಸೇರಿಸುತಲೆಮ್ಮ ಸಲಹಲಿ ನಿರತಂ ॥

ಬುತ್ತಿಯೇನು

(ಸ್ವಾಮಿ ದೇವನೇ ಎಂಬಂತೆ)

ಎಷ್ಟು ದೂರದಿ ಬಂದೆಯೊ—ಇ।
ನ್ನೆಷ್ಟುದೂರಕೆ ಪೋಗಲಿರುವೆಯೋ ॥
ಕಟ್ಟಿಕೊಂಡಿಹೆ ಏನು ಬುತ್ತಿಯ ।
ಬಟ್ಟೆಯೊಳಗಿಹ ಪಯಣಿಗಾ ? ॥೧॥
ಗೊತ್ತುಗುರಿಯೊಂದಿಲ್ಲದಿರುವ ।
ಪತ್ತನಕೆ ನೀಪೋಗಲಿರುವೆ ।
ಬುತ್ತಿಯನು ಕೊಂಡೊಯ್ಯದಿದ್ದೊಡೆ ।
ಮತ್ತೆ ಅಲ್ಲೇನುಣ್ಣುವೆ ? ॥೨॥

ಜ್ಞಾನಿಗಳ ಸಂಘದೊಳಗಿದ್ದು ।
ಜ್ಞಾನವೆಂಬುವ ಸುಧೆಯನಾರ್ಜಿಸು ॥
ದಾನವನು ಸತ್ಪಾತ್ರಕೀವುತ ।
ಗಳಿಸು ಅಕ್ಷಯ ಫಲವನು । ॥೩॥
ನೀಡಿಕರುಣದಿ ದಾನ ಉಪಕೃತಿ ।
ಮಾಡಿ ದೀನಾನಾಥರನು ನೀ ।
ನೋಡಿ ದಯದಿಂದುದ್ಧರಿಸಿ ಗಳಿ ।
ಸದರ ದಿವ್ಯ ಫಲಂಗಳಂ ॥೪॥
ಇಂತು ಫಲಗಳನಾರ್ಜಿಸುತಲಿ ।
ಸಂತೆಸದಲೀ ಕಟ್ಟ ಬುತ್ತಿಯ ।
ನಾಂತು ಶಿರದಲಿ ನಡೆದೆಯಾದೊಡೆ ।
ಸುಖದೊಳುಣಬಹುದಲ್ಲಿ ನೀ ॥೫॥
ಸನಿಹಕ್ಕೈದುವ ವೇಳೆಯಲ್ಲಿ ।
ತೃಣಕೆ ಸರಿಗಂಡೆಲ್ಲವನು ನೀ ।
ಮನವ ನಿನ್ನೊಳಗಿಟ್ಟು ಯಾತ್ರೆಯ ।
ಕೊನೆಯ ಮುಟ್ಟಲೆ ಪಯಣಿಗ । ॥೬॥

❖

ಜಿನಸ್ತುತಿ

(ಕಲಿಯುಗದಲಿ ಹರಿನಾಮವ ಎಂಬಂತೆ)

ಭುವವಿಜಯನೆ ತವ ನಾಮವ ನೆನೆದರೆ।
ಭವ ಬಾಧೆಗಳು ಪೀಡಿಸವೋ ಜಿನ ॥ಪಲ್ಲ॥
ಭವವನು ಗೆಲಿದೆ। ಜವನನು ತುಳಿದೆ।
ಶಿವಪದವಿಯ ನೀನಾಳಿದೆಯೋ ಜಿನ ॥ಭವ॥ ॥೧॥
ಮುಕುತಿಯ ಪಡೆಯೆ। ಯುಕುತಿಯನರಿಯೆ।
ಭಕುತಿಯನೊಂದನೆ ತಿಳಿದಿಹೆನೋ ಜಿನ।

ಸುಖಕರವೆನುವ ಮುಕುತಿಯ ಪಥವ।
ಭಕುತಿಂಗೊಲಿದು ನೀ ತೋರಿಸು ಜಿನ ॥೨॥
ಹೃದಯವೆ ಸುಮನ। ಭಕುತಿಯೆ ಚಂದನ।
ಇದಕೋ ನಿರ್ಮಲ ಪ್ರೇಮದಾರತಿ ಜಿನ।
ಮದನನ ಮುರಿದ। ಮದವನೆ ಸದೆದ।
ಸಹಪೊಲಗುಣಿ ತವ ಪದವ ಪೂಜಿಪೆ ಜಿನ ॥೩॥

❖

ಶ್ರೀ ಜಿನೇಂದ್ರ ಗೀತೆ

(ನಿಜಮಾನಪ್ರಾನಂ ಸಾ ಎಂಬಂತೆ)

ಜಿನನಾಮ ರಸಾಯನ ಪಾನ...
ದಿನ ಸೇವಿಸು ನೀ ಸುಖಿತನಾಗೋ... ಘನ ॥ಪಲ್ಲವಿ॥
ಭವವನು ಹರಿವಾ। ಭಾಗ್ಯವ ಕೊಡುವ ।
ಶಿವಸುಖ ಸಂಪದವನೀವಾ ... ॥ಜಿನ॥ ॥ಅ. ಪ.॥
ಸ್ವಾದಿಸಲಘುಬಾ ಬಾಧೆಯ ಕಳೆವಾ ।
ಬೋಧಾನ್ವಿತ ಶ್ರೀ ಲೀಲಾ ಮಯನಾ ॥೧॥
ಮೌನಿ ಜನಾಂಗ ಧ್ಯಾನವ ಗೈವಾ ।
ದೀನಾಶ್ರಯನಾ ನೆನೆಯೋ ಓ ಮನ ॥೨॥

❖

ಶ್ರೀ ಮಹಾವೀರ ಸ್ತುತಿ ಜಯಮಾಲೆ

(ವಿರಾಗ ಸನಾತನ್ನು ಶಾಂತನಿರಂಶ ಎಂಬಂತೆ)

ನಮೋ ನಮೋ ಶ್ರೀ ಸಿದ್ಧಾರ್ಥ ಕುಮಾರ । ನಮೋ ನಮೋ ।
ಕೇವಲ ಬೋಧ ವಿಹಾರ । ನಮೋ ನಮೋ ಚಿದ್ಗುಣ ಪೂರಿತ
ಧೀರ। ನಮೋ ನಮೋ ವೀರ ಶ್ರೀವೀರ ಸುವೀರ ॥೧॥

ಜರಾ ಮರಣಾದಿವಿನಾಶ ಜಿನೇಶಾ। ಸ್ಮರಾಂತಕ ಮುಕ್ತಿಶ್ರೀಕಾಂತ ವಿಲಾಸ । ನಿರಾಮಯ ನಿತ್ಯ ಶೃಂಗಾರ ಶರೀರ। ನಮೋ ನಮೋ ವೀರ ಶ್ರೀವೀರ ಸುವೀರ ॥೨॥

ಕಲಂಕರಹಿತ ದಯಾಸಾರ ಚರಿತ್ರ । ನಿಳಿಂಪನುತ ದುರಿತಾಷ್ಟಕ ರಹಿತ । ಶುಭಂಕರ ಚಿನ್ಮಯ ದೋಷ ವಿದೂರ । ನಮೋ ನಮೋ ಶೀವೀರಸುವೀರ ॥೩॥

ವಿಭಂಜಿತ ಮಾಯ ವಿಲೋಭಕಷಾಯ । ಪ್ರಬಂಧಿತ ಪಂಚಸ್ವ ಜ್ಞಾನನಿಲಯ ॥ ಸುಭವ್ಯ ಜನಾಂಬುಜ ಭಾಸ್ಕರ ಧೀರ । ನಮೋ ನಮೋ ವೀರ ಶ್ರೀವೀರಸುವೀರ ೪

ಅನಂತಚತುಷ್ಟಯಾತ್ಮಕ ವರ ರೂಪ । ಮುನೀಂದ್ರವಿನುತ ಮಹೋತ್ತುಂಗ ಪ್ರತಾಪ॥ ಸುನಿರ್ಮಲ ವರ ಪರಮಾಗಮಸಾಗರ। ನಮೋ ನಮೋ ವೀರ ಶ್ರೀ ವೀರಸುವೀರ ॥೫॥

ಅಪಾರ ಮಹಿಮ ವಾರಾಶಿಗಂಭೀರ । ಕೃಪಾಕರ ದಿವ್ಯ ಸುಗಂಧ ಶರೀರ । ಪ್ರಶಾಂತ ಹೃದಯ ಭಯ ಭ್ರಾಂತಿ ನಿವಾರ। ನಮೋ ನಮೋ ವೀರ ಶ್ರೀವೀರಸುವೀರ ॥೬॥

ಸುಧಾಂಶು ಭಾಸ ಸಂಸಾರ ಶರಧಿಯ। ಸಂತೋಷದಿ ದಾಟಿಸಿ ಕಾಪಾಡು ಜೀಯಾ। ಸದಾಕ್ಷಯ ಮೋಕ್ಷವ ಪಾಲಿಸು ಧೀರ। ನಮೋ ನಮೋ ವೀರ ಶ್ರೀವೀರಸುವೀರ ॥೭॥

ಶ್ರೀ ಗೊಮ್ಮಟಜಿನ ಸ್ತುತಿ

(ಮತ್ತೇಭವಿಕ್ರೀಡಿತಂ)

ಅರರೇ ನಿನ್ನ ತಪಕ್ಕೆ ಪಾಸಟಿಯೆ ಮೇಣ್ ನಿನ್ನೊಂದು ವೈರಾಗ್ಯಕೆ
ಸರಿಯೇ ನಿನ್ನ ದೃಢಕ್ಕೆ ಧೈರ್ಯಕೆ ಮಹಾತ್ಯಾಗಕ್ಕಮೀ ಲೋಕದೊಳ್
ದೊರೆಯಾಗಿರ್ದೊಡಮೆಲ್ಲಮಂ ತೃಣಮೆನುತ್ತಾ ರಾಜ್ಯಭೋಗಂಗಳಂ
ತೊರೆದಿಲ್ಲೀ ಗಿರಿಯಗ್ರದೊಳ್ ನಿಲಲು ನೀನೇಂ ಚಾಗಿಯೋ ಗೊಮ್ಮಟಾ
ಗುಡುಗಿಂಗಂಜದೆ ಮಿಂಚು ಮಿಂಚಲದಕುಂ ನೀಂ ಬೆಚ್ಚದೇ ಧೈರ್ಯದೊಳ್
ಒಡನಾ ಪೆರ್ಮಳೆ ಸೋರುತಿರ್ದೊಡದಕುಂ ಅತ್ತಿತ್ತಲಲ್ಲಾಡದೇ
ಕಡುಪಿಂ ಬೀಸುವ ಗಾಳಿಗುಂ ನಡುಗದೇ ನೀನಾವ ಸಾಮರ್ಥ್ಯದಿಂ
ನಿಡುಗಲ್ಲೊಳ್ ದೃಢಮಾಗಿ ನಿಂದಿರುವೆಯಾ ನಾಂ ಬಲ್ಲೆನೇಂ ಗೊಮ್ಮಟಾ
ಒಡಲಂ ದಂಡಿಸಿ ಕರ್ಮಮಂ ಕೆಡಿಸಿ ಬಲ್ಮೋಹಾದ್ರಿಯಂ ಚೂರ್ಣಿಸಿ
ಜಡಿದಾ ಅಂತಕರಾಜನಂ ಜಯಿಸಿ ನೀಂ ಪಾಪಾರಿಯಂ ಭಂಜಿಸಿ
ಬಿಡದಾ ಮುಕ್ತಿಯ ರಾಜ್ಯಮಂ ಪಡೆವಗೀ ತಾಪಂಗಳೇಂ ಗಣ್ಯಮೇ
ತಡಮೇಕೀ ಬಡಜೀವಿಯಂ ಪೊರೆವುದೈ ನೀನೊಲ್ದಿನಿಂ ಗೊಮ್ಮಟಾ

ಭಗವಾನ್ ಶ್ರೀ ಮಹಾವೀರ ಸ್ವಾಮಿಯ ಜೋಗುಳ

(ಪಾದನೇತ್ರಯೊಳು ಜನಿಸಿದ ಶಿವನೆ ಎಂಬಂತೆ)

ಕಟ್ಟಿದರ್ ಚಿನ್ನದ ಸರಪಣಿಗಳನೂ ।
ಇಟ್ಟರು ರನ್ನ ಕೆತ್ತಿಸಿದ ತೊಟ್ಟಿಲನೂ ।
ಬಟ್ಟಮುತ್ತಿನ ಜಾಲರಿಗಳನಿಳಿಸಿ ।
ಪಟ್ಟೆ ಪೀತಾಂಬರಗಳನಳವಡಿಸಿ ।
ಪುಟ್ಟ ಬಾಲಕನು ಲೋಕೋತ್ತರನಿವನೆಂದು
ಅಷ್ಟಶೋಭೆಗಳೆಸೆಯಲು ತ್ರಿಶಲಾದೇವಿ
ಇಟ್ಟು ತೂಗಿದಳೂ ಜೋ ಜೋ ಎಂದೂ ॥೧॥

ಸಿದ್ಧಾರ್ಥರಾಜನ ಬಾಲನ ಕಂಡು
ಶುದ್ಧ ಸಾಸಿರದೆಂಟು ಲಕ್ಷಣಗಳನು
ಹೊದ್ದಿಹನಿವ ಜಗಪೂಜಿತನೆಂದು
ಸದ್ಧರ್ಮ ವಾರ್ಧಿವರ್ಧನ ಚಂದ್ರನೆಂದು
ವರ್ಧಮಾನನೆಂಬ ನಾಮವನಿರಿಸಲು
ವಾದ್ಯ ಘೋಷಗಳು ಮೊಳಗೆ ಸಂಭ್ರಮದೊಳು ।
ಸಾಧ್ವಿಯರು ಪಾಡಿ ಪೊಗಳ್ದರು ॥೨॥

ಅಜ್ಞಾನತಿಮಿರ ಮುತ್ತಿಹುದು ಲೋಕವನೂ
ಸುಜ್ಞಾನ ಭಾನು ನೀನುದಿಸಿದ್ಯೆ ಇನ್ನು।
ಯಜ್ಞ ಯಾಗವ ಗೈದು ಪಶು ಬಲಿಕೊಡುವ ।
ಅಜ್ಞರೆದೆಗೆ ನೀಡು ಅರಿವಿನ ಬೆಳಗ
ಸಜ್ಜನಕೊದಗಿದ ದುಃಖವ ಹರಿಸುತ
ಮೂಜಗದೊಳು ಪೂಜ್ಯನಾಗುನೀ ಎಂದು
ಕಂಜಳಾಕ್ಷಿಯರು ತೂಗಿದರು । ಜೋ ಜೋ ॥೩॥

ಲೆಕ್ಕವಿಲ್ಲದ ಜಾತಿಮತಗಳುದ್ಭವಿಸಿ ।
ಸಿಕ್ಕಲ್ಲಿ ಪಂಥಪಾಳಿಗಳು ಏಂದೆಣಿಸಿ ।
ಆಕ್ಕಟೋರ್ವರನೋರ್ವರು ಹಿಂಸೆಪಡಿಸಿ
ಕಕ್ಕಸಗೊಳಿಸಿ ಸಜ್ಜನರ ಕಂಗೆಡಿಸಿ ।
ದುಃಖಾಗ್ನಿಯೊಳು ಬೆಂದು ಬೆಂಡಾದ ಜನತೆಗೆ ।
ಚೊಕ್ಕ ದಯಾ ಮೂಲ ಧರ್ಮವ ಬೋಧಿಸು ।
ಮಕ್ಕಳ ಮಣಿಯೇ ಗುಣಗಣಿಯೇ ॥೪॥

ಮಿಥ್ಯೆಯೆಂಬುವ ಮಾಯಾ ಪಾಶಕ್ಕೆ ಸಿಲುಕಿ ।
ಸ್ವಾರ್ಥಾಂಧರಾಗಿಹ ಜನತೆಗೆ ಮರುಗಿ
ಸತ್ಯಶೋಧನೆ ಗೈವುಪಾಯವ ಪೇಳಿ
ಸತ್ಯದ ತಿರುಳ ಸಾಧನೆಯಿಂದ ತೋರಿ

ನಿತ್ಯ ಸುಖಕೆ ಪೋಪ ಹೆದ್ದಾರಿಯನು ತೋರು
ನಿತ್ಯ ಮಂಗಲನೆ ಮಹಾವೀರ ಎನುತಲಿ
ಮುತ್ತೈದೆಯರ್ ಪಾಡಿ ಪೊಗಳ್ದರು ॥೫॥

ಂಂ

ಶ್ರೀ ತೀರ್ಥಂಕರರ ಆರತಿ

ಮಂಗಳ ಗೀತೆ

ಮಂಗಳಂ ಜಯ। ಶುಭ ಮಂಗಳಂಜಯ—ಅಂಗಜಾರಿ ಪುಂಗವಾ। ಜಿನೇಂದ್ರಜಯಜಯ। ನಾಭಿಜಾಜಯ। ಅಜಿತ ಶ್ರೀಜಿನಜಯ। ಶಂಭವಾಭಿ ನಂದನಾಪ್ತ। ಸುಮತಿಜಯ ಜಯಾ ॥೧॥

ಪದ್ಮಜಿನಜಯ। ವರಸುಪಾರ್ಶ್ವ ಜಯ ಜಯ । ಚಂದ್ರನಾಥ ಪುಷ್ಪದಂತ ಶೀತಳಾಜಯ ॥೨॥

ಶ್ರೇಯಾಂಸ ಜನ ಜಯಾ । ವಾಸು ಪೂಜ್ಯ ಜಯಜಯ। ಕಾಯಜಾರಿ ವಿಮಲನಂತ ಧರ್ಮ ಜಯ ಜಯ ॥೩॥

ಶಾಂತಿ ಜಿನ ಜಯಾ। ವರದ ಕುಂಥು ಜಯ ಜಯ ಧ್ವಾಂತ ರಹಿತ ಅರಜೇನೆಶಮಲ್ಲಿ ಜಯಜಯಾ ॥೪॥

ಮುನಿಸುವ್ರತ ಜಯ। ನಮಿನೇಮಿ ಜಯಜಯಾ॥ ಮುನಿವಂದ್ಯಪಾರ್ಶ್ವ ನಾಥ ವರ್ಧಮಾನ ಜಯ ಜಯಾ ॥೫॥

ಂಂ

ತತ್ತ್ವಪದ

(ಅನುರಾಗದಾ ಆರಾಧನಾ ಎಂಬಂತೆ)

ಭಾವಿಸೋ ಮನ ಶುಭಭಾವನ . . ಸುಖಶಾಂತಿಗದು ಸಾಧನ ನಾಳೆ
ಮುಕುತಿಗೊಯ್ಯುವ ವಾಹನಾ . . ॥ಪ॥

ಆತ್ಮವಿಶೋಧನ ಸಮಭಾವನ। ಸ್ವಾರ್ಥರಹಿತಪರಹಿತಸಾಧನಾ . . ॥
ಜೀವಾತ್ಮನಾ ಹಿತ ನಾಳಿನಾ . . ಪುಣ್ಯದ ಬೆಳೆಯುಂಕುರಾರೋಪಣ॥
॥ಭಾವಿಸೋ ಮನ॥೧॥

ಈರಾರು ಅನುಪ್ರೇಕ್ಷೆಗಳ ಭಾವನಾ। ಚಾರುರತ್ನತ್ರಯಗಳ ಧಾರಣ . .॥
ಭವತಾರಣ ಬಲು ಪಾವನಾ . .। ದಶಧರ್ಮಗಳ ತ್ಯಾಗಮಯಜೀವನ
॥ಭಾವಿಸೋ ಮನ॥೨॥

ನಿರುಪಮವಾದಷೋಡಶಭಾವನ। ಪರಮ ತೀರ್ಥಂಕರ ಸುಖಕಾರಣ ..॥
ಪರಮಾತ್ಮನಾ ಚಿರಚಿಂತನಾ . .। ಪರಿತಾಪಪರಿಹಾರ ಸಂಜೀವನಾ॥
॥ಭಾವಿಸೋ ಮನಾ ॥೩॥

●●

ಶ್ರೀ ನೇಮಿನಾಥಸ್ವಾಮಿ ಗರ್ಭಾವತರಣ ಕಲ್ಯಾಣ

ರಾಗ-ಷಣ್ಮುಖಪ್ರಿಯ ಆದಿತಾ

(ಜಯತೀರ್ಥಂಕರ ಎಂಬಂತೆ)

ನೇಮಿಜಿನೇಶ್ವರ ನೇಮಿಜಿನೇಶ್ವರ।
ನೇಮಿಜಿನೇಶ್ವರ ಪೊರೆಯೊ ಸದಾ॥ ॥ಪ॥

ಆ ಮಹಾಗರ್ಭಾವತರಣ ಕಲ್ಯಾಣದ।
ಸ್ವಾಮಿಯೆ ನಿನ್ನನು ಕೀರ್ತಿಸುವೆ॥
ನಾಮವ ಜಪಿಸುತ ಪ್ರೇಮದಿ ಪಾಲಿಸು।
ಭೂಮಿಗಧಿಕಸುಖಕ್ಷೇಮವನು॥ ॥೧॥

ವಾಣಿಯೆ ಎನ್ನಯ ಮನದಲಿ ನೆಲಸುತ।
ಜ್ಞಾನಾನಂದವ ಸೂಸುತಲಿ॥
ಕಾಣಿಸು ಮತಿಯನು ಧ್ಯಾನಿಪೆ ನಿನ್ನನು।
ನೀನೀ ಕೃತಿಯನು ನುಡಿಸೆನುತ ॥೨॥

ಶಿರವನು ಬಾಗಿಸಿ ಗುರುವರನಂಘ್ರಿಗೆ।
ಬರೆಯುವೆ ನೇಮಿ ತೀರ್ಥೇಶ್ವರನ ॥
ನಿರುಪಮ ಗರ್ಭಾವತರಣ ಕಲ್ಯಾಣದ।
ಪರಿಯನು ಲಾಲಿಸಿ ಮೋದದೊಳು ॥೩॥

ಭರತಾವನಿಯಲಿ ಶರಧಿಯ ಮಧ್ಯದಿ।
ಸುರಪುರವನು ನೆರೆಜರೆವುದೆನೆ।
ಉರುತರ ವಿಭವದಿ ಮೆರೆಯುತಲಿರುವುದು।
ವರದ್ವಾರಾವತಿ ಪುರವದನು ॥೪॥

ಪರಿಪಾಲಿಸುವನು ಶರಧಿವಿಜಯನೆಂ।
ಬರಸನು ನೀತಿವಿಶಾರದನು॥
ಹರಿಕುಲತಿಲಕನು ಪರಹಿತಚರಿತನು।
ಅರಿಕುಲಗಜಕಂಠೀರವನು ॥೫॥

ಆ ಮಹಿಪಾಲನ ಪ್ರೇಮದ ವಲ್ಲಭೆ।
ಕಾಮಿನಿಯರ ಕುಲದೀಪಿಕೆಯು॥
ಭಾಮೆಯು ಶಿವದೇವಿ ನಾಮದಿ ಮೆರೆವಳು।
ಭೂಮಿಯೊಳತಿಶಯವೆತ್ತಿಹಳು ॥೬॥

ದಂಪತಿಗಳು ಸುಖಸಾರಸೌಭಾಗ್ಯದ।
ಸಂಪದ ಪಡೆದಿರೆ ಪೆಂಪಿನೊಳು॥
ಕಂಪಿಸಿತೊಂದಿನ ಕೌತುಕವೆನಲು ನಿ।
ಲಿಂಪನ ಗದ್ದುಗೆ ಸಗ್ಗದೊಳು ॥೭॥

ಆರುಮಾಸದೊಳಿನ್ನು ಮಾರವಿಜೇತನು।
ಕಾರಣಪುರುಷನು ಕಲಿಲಹರ॥
ಧೀರನು ಜಗದೋದ್ಧಾರನು ದುರಿತ ನೀ।
ವಾರನು ನೇಮಿತೀರ್ಥೇಶ್ವರನು ॥೮॥

ಅವತರಿಸುವನಾ ಅಂಬುಧಿವಿಜಯ।
ಶಿವದೇವಿಯ ಗರ್ಭದೊಳೆನುವಾ॥
ವಿವರವನಿಂದ್ರನು ಅವಧಿಯೊಳರಿಯುತ॥
ತವಕದೊಳರುಹಲು ಸರ್ವರಿಗೆ ॥೯॥

ತುಂಬಿದ ಸುರನಿಕುರುಂಬದಿ ಜಯಜಯ।
ವೆಂಬುವರವ ತಾ ಮೊಳಗಿದುದು॥
ಅಂಬುಧಿ ತುಳುಕಿದುದೆಂಬವೊಲ್ ಸುರರು।
ಸಂಭ್ರಮದಲಿ ನಲಿದಾಡಿವರು ॥೧೦॥

ಜಿನಪತಿಭೂಮಿಗೆ ಜನಿಸುವ ತನಕವು।
ಕನಕದವೃಷ್ಟಿಯಗರೆಯುನುತ ॥
ಧನದಗೆ ಬೆಸಸಲು ಅನುದಿನವಾತನು।
ಮಣಿಮಯ ವರ್ಷವ ಸುರಿಸುತಿರೆ ॥೧೧॥

ಧರೆಯೊಳಗಿಹ ದಾರಿದ್ರ್ಯವು ತೊಲಗಿತು।
ಸಿರಿಸಂಪದ ತುಳುಕಾಡಿದುದು ॥
ಅರಸನಪುಣ್ಯದಪರಿಯಿದು ಎನ್ನುತ।
ಪುರಪರಿವಾರ ಕೊಂಡಾಡುತಿರೆ ॥೧೨॥

ಕುಲಗಿರಿರುಚಕಕುಂಡಲಗಿರಿಯಗ್ರದಿ।
ನೆಲಸಿಹ ದಿವಿಜೆಯರುತ್ಸಹದಿ ॥
ತಿಳಿದಮರೇಂದ್ರನು ಬೆಸಸಲು ಬಂದರು।
ಸಲೆ ಶಿವದೇವಿಯ ಸೇವಿಸಲು ॥೧೩॥

ಒದಗಿ ಪದಿನಾರು ನದಿಗಳ ಜಲವನು।
ಸುದತಿಗೆಮಜ್ಜನ ಗೈಸುವರು ॥
ಸದಮಲ ವಸನ ಭೂಷಣಗಳ ತೊಡಿಸುತ।
ವಿಧವಿಧದಲಿ ಸಿಂಗರಿಸುವರು ॥೧೪॥

ನಿತ್ಯನವೀನ ಶೃಂಗಾರವ ಗೈವರು।
ಮುತ್ತಿನ ಹಸೆಯ ಮೇಲಿರಿಸುವರು ॥
ಇತ್ತೆರದೊಳು ಚಾಮರಗಳ ಡಾಳಿಸಿ।
ಸತ್ತಿಗೆ ಪಿಡಿದು ಓಲೈಸುವರು ॥೧೫॥

ಬಾಜಿಸಿ ಮೃದಂಗವ ವೀಣೆಯನಾದದಿಂ।
ರಾಜೀವಮುಖಿಯರು ಪಾಡುತಲೀ ॥
ಮೂಜಗದೊಡೆಯನ ಮಾತೆಯ ಚರಣವ।
ಪೂಜಿಸಿ ಮುದದಿ ಕೊಂಡಾಡುವರು ॥೧೬॥

ಮುತ್ತಿನಸೇಸೆಯನಿಕ್ಕಿ ನಮಿಸುವರು ॥
ರತ್ನಗಳಾರತಿ ಬೆಳಗುವರು ॥
ನೃತ್ಯಗೀತೆಗಳನು ಆಡುತ ಪಾಡುತ ॥
ನಿತ್ಯವಿನೋದವದೋರುವರು ॥೧೭॥

ಒದಗಿಸಿ ದಿವ್ಯೌಷಧಿಗಳ ನೀಡುತ।
ಉದರದ ಶೋಧನೆ ಮಾಡುವರು॥
ವಿಧವಿಧವಾದ ದಿವ್ಯಾಹಾರವೀಯುತ।
ಸುದತಿಮಣಿಯನಾರೈಸುವರು ॥೧೮॥

ಓಲೈಸುತಲೀಪರಿಯೊಳಗಾ ಸುರ।
ಬಾಲೆಯರಿರುತಿರಲೊಂದಿಹಳು॥
ಲೋಲನಯನೆ ಶಯ್ಯಾಲಯದಲಿ ಸುಖ।
ಕೇಳಿಯಾನಂತರ ಸಂತಸದಿ ॥೧೯॥

ಮೃದುತಲ್ಪದೊಳಾ ಮದಗಜಗಮನೆಯು।
ಒದಗಿದನಿದ್ರೆಯೊಳಿರುತಿರಲು॥
ಸುದತಿಯು ಕಂಡಳು ಬೆಳಗಿನ ಜಾವದಿ।
ಪದಿನಾರನುಪಮ ಸ್ವಪ್ನಗಳ ॥೨೦॥

ಕಂಡಳು ಕರಿಪತಿ ವೃಷಭನ ಹರಿಯನು।
ಕಂಡಳು ಸಿರಿಯನು ಸೌರಭವ॥
ಗೊಂಡಿಹ ಕುಸುಮದ ಮಾಲೆಗಳೆರಡನು।
ಕಂಡಳು ರವಿಶಶಿ ಮಂಡಲವ ॥೨೧॥

ಕಂಡಳು ತುಂಬಿದ ಕಲಶಗಳೆರಡನು।
ಕಂಡಳು ಮೀನ್ಗಳ ಯುಗ್ಮವನು ॥
ಕಂಡಳು ಸರಸಿ ಸಮುದ್ರವನಾಸತಿ।
ಕಂಡಳು ಭುಜಗನ ಭವನವನು ॥೨೨॥

ಕಂಡಳು ಮಿನುಗುವ ರತ್ನದರಾಶಿಯ।
ಕಂಡಳು ಪ್ರಜ್ವಲಿಪಗ್ನಿಯನು॥
ಕಂಡಳು ಹರಿವಿಷ್ಟರವನು ಕಾಮಿನಿ।
ಕಂಡಳು ಸುರವೈಮಾನವನು॥ ॥೨೩॥

ಕಾಣುತಲೀಪರಿ ಷೋಡಶ ಸ್ವಪ್ನವ।
ಮಾನಿನಿ ನಿದ್ದೆಯೊಳ್ ತಿಳಿಯುತಲಿ॥
ಭೂನಾಥಗೆ ಬಿನ್ನವಿಸಲು ಮನದಲಿ।
ಸಾನಂದಾಚ್ಚರಿತಾಳುತಲಿ ॥೨೪॥

ಅತಿಶಯ ಪುಣ್ಯದ ಫಲದ ಪ್ರಭಾವದಿ।
ಸತಿಕುಲತಿಲಕೆ ನಿನ್ನುದರದಲಿ॥
ಯತಿನುತ ಶ್ರೀ ಜಿನಪತಿಯುದಿಸುವನೆನೆ।
ಸತತಾನಂದದೊಳಿರುತಿರಲು ॥೨೫॥

ಅವಧಿಯೊಳರಿತಮರೇಂದ್ರ ಚತುರ್ವಿಧ।
ದಿವಿಜಸಮೂಹವ ಕೂಡುತಲಿ॥
ವಿವಿಧ ವಿಭವದಿ ದ್ವಾರಾವತಿ ನಗರಿಂಗೆ।
ತವಕದಿ ಬಂದು ರಾಜಾಲಯಕೆ ॥೨೬॥

ಜಿನಪನ ಜನನಿಜನಕರನು ವಂದಿಸಿ।
ಮಣಿಮಯ ವಿಷ್ಟರಕೇರಿಸುತ॥
ವಿನಯದಿ ಪೂಜಿಸಿ ಪಾಡಿ ಕೊಂಡಾಡಿದ।
ನನಿಮಿಷರಧಿಪತಿ ಸಂಭ್ರಮದಿ ॥೨೭॥

ಗರ್ಭಾವರತಣ ಕಲ್ಯಾಣವ ಸುರಪತಿ।
ನಿರ್ಭರಭಕ್ತಿಯೊಳೆಸೆಯುತಲಿ॥
ನಿರ್ಜರನಗರಿಗೆ ತೆರಳಿದನಿತ್ತಲು।
ಗರ್ಭದಿ ಬೆಳೆದ ತೀರ್ಥೇಶ್ವರನು॥ ನೇಮಿಜಿನೇಶ್ವರ॥ ॥೨೮॥

೧೧

ಶ್ರೀ ಚತುರ್ವಿಂಶತಿ ತೀರ್ಥಂಕರ ಆರತಿ ಶೋಭಾನೆ

ರಾಗ—ಕೇದಾರತಾಳ ತಾಳ—ಮಿಶ್ರಛಾಪು

ಮಂಗಳಾರತಿ ತಂದು ಬೆಳಗುವೆ ಮಂಗಲ ವೆಸಲೆ ಪಾಡುತ ।
ಅಂಗಜಾರಿಗಳೆಂಬ ಚವ್ವೀಸ ಮಹಿಮಾವತರರಿಂಗೆ ॥ಪ॥

ಆದಿಜಿನ ಅಜಿತೇಶ ಸಂಭವ ।
ಬೋಧಪತಿವಭಿನಂದನ ॥
ಸಾದರದ ಸುಮತೀಶ ಪದ್ಮಜಿನಾದಿಪ್ರಭುಗಳ ಪಾದಕೆ ॥೧॥

ಕ್ಲೇಶರಹಿತ ಸುಪಾರ್ಶ್ವಜಿನಪಗೆ ।
ಭಾಸ ಚಂದ್ರ ಜಿನೇಶಗೆ ॥
ಈಶ ಪುಷ್ಪದಂತೇಶ ಶೀತಲ ।
ಶ್ರೀಶ ಶ್ರೇಯೋಜಿನಪಗೆ ॥೨॥

ವಾಸುಪೂಜ್ಯರು ವಿಮಲ ಶ್ರೀಜಿನ ।
ಕ್ಲೇಶವರ್ಜಿತನಂತಗೆ ॥
ಈಶಧರ್ಮಜಿನೇಶಶಾಂತಿ ಮ ।
ಹೇಶ ಕುಂಥುಜಿನೇಶಗೆ ॥೩॥

ಅರ ಜಿನೇಂದ್ರರು ವರ ಸುಮಲ್ಲಿಯು ।
ಪರಮ ಸುವ್ರತ ಜಿನರಿಗೆ ॥
ನಿರುತ ನಮಿ ಜಿನ ಅರುಹ ನೇಮಿಯು ।
ಉರಗಲಾಂಛನ ಪಾರ್ಶ್ವಗೆ ॥೪॥

ವರ್ಧಮಾನ ಜಿನೇಂದ್ರರೀಗಲು ।
ವೃದ್ಧಿಗೊಳಿಸಲಿ ಭವ್ಯರ ॥
ಬುದ್ಧಿಯಿಂದ ಜಿನೇಂದ್ರರಡಿಗಳ ।
ಪದ್ಮವನು ಸಲೆವಂದಿಪೆ ॥ ಮಂಗಳಾರತಿ ತಂದು ಬೆಳಗುವೆ ॥೫॥

oo

ಶ್ರೀ ಶಾಂತಿನಾಥ ಸ್ವಾಮಿ ಪಂಚಕಲ್ಯಾಣ ಆರತಿ

ರಾಗ-ಭಾಗೇಶ್ರೀ ಆದಿತಾಳ

ಆರತಿ ಬೆಳಗುವೆ ಶಾಂತಿನಾಥನ ।
ಚರಣಕಮಲಕೆರಗಿ ॥ಪ॥
ಮೊದಲನೆ ಆರತಿ ಗರ್ಭಾವತರಣ ॥
ಮುದದಿಂ ಸುರನರಸೇವಿತಚರಣ ॥೧॥

ಎರಡನೆ ಆರತಿ ಜನ್ಮಾಭಿಷವಣ ॥
ಹರುಷದಿ ಪಾಂಡುಕಶಿಲೆಯೊಳ್‌ಸ್ನಪನ ॥೨॥

ಮೂರನೆ ಆರತಿದೀಕ್ಷಾಗ್ರಹಣ ॥
ಪರಮ ದಿಗಂಬರ ಚಾರಿತ್ರ ಧಾರಣ ॥೩॥

ನಾಲ್ಕನೆ ಆರತಿ ಕೇವಲ ಜ್ಞಾನ ॥
ಸಮವಸರಣದೊಳು ವರಧ್ವನಿ ಜನನ ॥೪॥

ಐದನೆ ಆರತಿ ನಿರ್ವಾಣಗಮನ ।
ಶಾಶ್ವತಸುಖಕರ ಮುಕ್ತಿಯ ಭವನ ॥೫॥

ಆರನೆ ಆರತಿ ಶ್ರೀ ಪರಮೇಷ್ಠಿ ॥
ಪರಮ ಮಂಗಲ ಪಂಚಗುರುಗಳ ಸ್ಮರಣ ॥೬॥

ಏಳನೆ ಆರತಿ ಪರಮಾತ್ಮ ಧರ್ಮ ॥
ಶ್ರಾವಕಮುನಿವ್ರತಭೇದದಿ ನಿಯಮ ॥೭॥

ಎಂಟನೆ ಆರತಿ ಶ್ರೀ ಜಿನವಾಣಿ ॥
ಜಿನಮುಖ ಕಮಲದಿ ಜನಿಸಿದ ವಾಣಿ ॥೮॥

ನವಮಿ ಆರತಿ ಶಾಸನ ದೇವತೆ ॥
ವರರತ್ನತ್ರಯಜಿನಧರ್ಮಸುಪಾಲಿತೆ ॥೯॥

oo

ಶ್ರೀ ಮಹಾವೀರಸ್ವಾಮಿ ಆರತಿ

ರಾಗ-ಜುಂಜೂಟಿ ಆದಿತಾಳ

(ಭವವಿಜಯನೆತವನಾಮವ ನೆನೆದರೆ ಎಂಬಂತೆ)

ಆರತಿ ಬೆಳಗುವ ಬಾರೆಲೆ ಬಾ ಸಖಿ ।
ಮಾರವಿದೂರಗೆ ಸಾರಸಸಮ ಮುಖಿ ॥
ಸುರುಚಿರನಂತದರುಶನಗೊಡೆಯ ।
ಪರಮ ಪವಿತ್ರನ ಪಾಡುವೆ ಬಾ ಸಖಿ ॥ಪ॥

ಮೆರೆಯುವ ಪಾವಾಪುರದಲಿ ತಪವಾ ॥
ಚರಿಸಿ ಮುಕುತಿಯು ಪಡೆದವನಿಗೆ ಸಖಿ ।
ಆರು ವೈರಿಗಳನು ಗಾರುಗೊಳಿಸಿದಗೆ ।
ಶ್ರೀ ಗುರುಹಂಸಗೆ ಬೇಗದಿಂದಲಿ ಸಖಿ ॥೧॥

ಭೋಗವ ತೊರೆದು ತ್ಯಾಗವ ಪಡೆದು ।
ಯೋಗವನೊಂದನೆ ಪಿಡಿದನಿಗೆ ಸಖಿ ॥
ಆಗಮರೂಪಗೆ ರಾಗ ವಿರಹಿತಗೆ ।
ಶ್ರೀ ಗುರುಹಂಸಗೆ ಬೇಗದಿಂದಲಿ ಸಖಿ ॥೨॥

೦೦

ಜಿನಮಾತೆಯ ಆರತಿಶೋಭಾನೆ

ರಾಗ—ಆರಭಿ ಆದಿತಾಳ

(ಕಂಜದಳಾಕ್ಷಿಣಿ ಕಮಲಿನಿಗೆ ಎಂಬಂತೆ)

ವರಕಾಶಿಪತಿ ವಿಶ್ವಸೇನನಿಗೆ ।
ಅರಸಿ ಬ್ರಾಹ್ಮಿಲದೇವಿ ಉದರದಲಿ ॥
ಬರುವನಿಪ್ಪತ್ತಮೂರನೆ ಜಿನನುದಯಕೆ ।
ತ್ವರಿತದಿ ದೇವೇಂದ್ರನವಧಿಯೊಳು ॥
ಆರತಿಯೆತ್ತಿರೆ ಆರತಿಯ ॥೧॥

ಇನ್ನಾರು ತಿಂಗಳಿಗುದಯಿಸುವನು ।
ಪನ್ನಗಸುರನರನುತನೆನುತ ॥
ಚೆನ್ನಕುಬೇರಗೆ ಬೆಸಸೆ ದೇವೇಂದ್ರನು ।
ರನ್ನವೃಷ್ಟಿಯನನುದಿನಗರೆಯ ॥ ಆರತಿ ॥೨॥

ಸ್ವಾಮಿಯಂಬಿಕೆಯ ಸೇವಿಸಲೆನುತ ।
ನೇಮಿಸಿ ಸುರಸತಿಯರ ಕಳುಹೆ ॥
ಆ ಮಹದೇವಿಯ ಗರ್ಭಶೋಧನೆ ಮಾಡಿ ।
ಪ್ರೇಮದಿಂದಲಿ ಸೇವೆಯೆಸಗಿದರು ॥ಆರತಿ ॥೩॥

ಕಂಡಳು ಷೋಡಶ ಸ್ವಪ್ನಗಳ ।
ಪುಂಡರಿಕಾನನೆಯೊಂದಿರುಳು ॥
ಹಿಂದು ಕರ್ಮವಗೆಲ್ದು ಮುಕುತಿಯ ವರಿಸುವ ।
ಗಂಡನು ಒಳಗರ್ಭಕವತರಿಸೆ ॥ಆರತಿ ॥೪॥

ಗರ್ಭದೊಳುದಿಸಿದ ಜಿನನೆನುತ ।
ಭೋರ್ಗರೆದುದು ಸುರದುಂದುಭಿಯು ॥
ನಿರ್ಭರಭಕ್ತಿಯಿಂದಮರರು ಗೈದರು ।
ಗರ್ಭಾವತರಣ ಕಲ್ಯಾಣವನು ॥ ಆರತಿ ॥೫॥

ಮೆರೆವ ಸ್ಫಟಿಕದ ಕಲಶದೊಳಗೆ ।
ಮರಕತಮಣಿಯೆನೆ ಬಸುರಿನಲಿ ॥
ಸ್ಮರಿಸುತ ಶಾಂತಿಯ ಬೆಳೆಯುತ ಬೆಳೆಯುತಲಿರೆ ಜಿನ ।
ಸುರತರುಣಿಯರಾರತಿಯೆತ್ತಿರೆ ॥ಆರತಿ ॥೬॥

ಜಯ ಜಯ ಪತಿ ವಿಶ್ವಸೇನನಿಗೆ ।
ಜಯ ಜಯ ಶ್ರೀ ಜಿನನಂಬಿಕೆಗೆ ॥
ಜಯ ಜಯ ಮಹಾಸತಿ ಬ್ರಾಹ್ಮಿಲ ದೇವಿಗೆ ।
ಜಯ ಜಯವೆನುತಾರತಿಯೆತ್ತಿರೆ ॥ ಆರತಿ ॥೭॥

೦೦

ಶ್ರೀ ಪದ್ಮಾವತೀ ದೇವಿಯಲ್ಲಿ ದೀನ ಪ್ರಾರ್ಥನೆ

ರಾಗ-ಮಾಲಹರಿ ತಾಳ—ಮಿಶ್ರಛಾಪು

(ರಾತ್‌ಬರಕಾ ಹೈ ಮಹಿಮಾ ಅಂಧೇರಾ ಎಂಬಂತೆ)

ಅಮ್ಮಾ ಏನಪರಾಧವಗೈದೆ।
ನಿನ್ನ ಕೃಪೆ ಏಕೆ ತೋರದಾದೆ ॥ಪ॥
ನಿನ್ನ ಶರಣು ರಕ್ಷಕಿಯೆಂಬ ಬಿರುದು।
ತಾನೆ ಮರೆವಳೆಂಬುದ ಕೇಳಿ ತಿಳಿದು॥
ನಿನ್ನ ಚರಣದಾಶ್ರಯ ಬೇಡಿ ಬಂದೆ।
ಯೆನ್ನನಾರೈದು ಕಾಪಾಡುಯೆಂದೆ॥ಅಮ್ಮಾ . . ॥೧॥
ಕಂದ ಜಿನದತ್ತನನು ನೀನೆ ಕಾಯ್ದೆ।
ಅಂದು ವನಮಾಲೆಯನು ನೀನೆ ಪೊರೆದೆ॥
ಓಂದೆ ನಾಗಾರ್ಜುನಗೆ ನೀ ಒಲಿದೆ।
ಇಂದು ಹೀಗೇಕುದಾಸೀನಳಾದೆ ॥ಅಮ್ಮಾ ॥೨॥
ನೀನು ಕಡಿವಾಣವನು ಚಿನ್ನಗೈದೆ।
ನೀನೆ ಅಡವಿಯ ಪುರವನಾಗಿಸಿದೆ॥
ನಾನು ಬಡವನಲ್ಲವೆ ತಾಯಿ ಬರಿದೆ।
ಇನ್ನು ತಡವೇಕೆ ಪೊರೆ ಕಯ್ಯಬಿಡದೆ ॥ಅಮ್ಮಾ ॥೩॥
ಅಮ್ಮಾ ಪಾರಿಶ್ವಜಿನರಡಿ ಭಕ್ತೆ।
ಒಮ್ಮೆ ತೋರು ಪರುಷದ ಮಹಾತ್ಮೆ॥
ದುಃಖದಾರಿದ್ರ್ಯ ಹರಿಸೆನ್ನಮಾತೆ।
ಧೀರ ಧರಣ ರಾಜೇಂದ್ರನ ಪ್ರೀತೆ ॥ಅಮ್ಮಾ ॥೪॥
ಅಮ್ಮಾ ಪೊಂಬುಜ್ಜನಗರಾಧೀಶೆ।
ಅಮ್ಮಾನಿಗುರ್ಂಡಿತರುಮೂಲದಾಸೆ॥
ನಿಮ್ಮನಂಬಿದೆನ್ನಯ ಮನದಾಸೆ।
ಸಲಿಸಂಬ ಬಾಲಾರ್ಕ ಪ್ರಕಾಶೆ ॥ ಅಮ್ಮಾಯೇನಪರಾಧವಗೈದೆ ॥೫॥

ಶ್ರೀ ಭಾರತೀಸ್ತುತಿ

(ಅನುರಾಗದ ಆರಾಧನಾ.... ಎಂಬಂತೆ)

ಶ್ರೀ ಭಾರತಿ ಸುಖದಾಯಕಿ ಸುಜ್ಞಾನರೂಪಿಣಜ್ಯೋ . . ಶ್ರೀ
ದೇವಿ ಸಜ್ಜನರಿಗೆ ಸಾರಥಿ . .
ಆದಿಬ್ರಹ್ಮನ ರಾಣಿ ಅಘನಾಶಿನಿ। ॥ಪಲ್ಲ॥
ವೇದಸ್ವರೂಪಿಣಿ ವರದಾಯಿನಿ॥
ಭವತಾರಿಣಿ . . ಭಯಹಾರಿಣಿ . ।
ಸುವಿಚಾರ ಸುವಿವೇಕ ಸಂವರ್ಧಿನಿ . ॥ಶ್ರೀ ಭಾರತಿ ॥೧॥
ಸಕಲಾಗಮದಸಾರೆ ಶ್ರುತದೇವತೆ।
ಅಖಿಲವಿದ್ಯಾಕಲಿಗಧಿದೇವತೆ॥
ಕ್ಷಿತಿಪೂಜಿತೆ . . ಯತಿಸೇವಿತೆ . . . ।
ಮತಿದಾತೆ ಮಹಾಮಾತೆ ವಾಗ್ದೇವತೆ ॥ಶ್ರೀ ಭಾರತಿ ॥೨॥
ಸದಮಲದ್ವಾದಶಾಂಗವಿಶೋಭಿನಿ।
ಸದ್ಭವ್ಯರಿಗೆ ನೀನೆ ಚಿಂತಾಮಣಿ . . ॥
ಮೃದುಭಾಷಿಣಿ. . ಬುಧಪೋಷಿಣಿ . . . ।
ಸದ್ಬೋಧ ಸ್ಯಾದ್ವಾದ ವಾಗ್ವಾದಿನಿ ॥ಶ್ರೀ ಭಾರತಿ ॥೩॥
ಓಂಕಾರ ರೂಪ ಸ್ವರೂಪೆ ವಾಣಿ ।
ಶಂಕರಹಿತೆ ತತ್ವ ಪ್ರತಿಪಾದಿನಿ . . . ॥
ಸಂತೋಷಿಣಿ . . . , ಸುಗುಣಾಮಣಿ . . . , ॥
ಸಂತಾಪಹರೆ ಶಾಂತಿ ಸಂದಾಯಿನಿ . . ॥ ಭಾರತಿ ॥೪॥
ಸರ್ವಭಾಷಾ ಶಾಸ್ತ್ರ ಸಮುದ್ಭಾಯಿನಿ ।
ಸರ್ವತತ್ವಾರ್ಥ ಸಮುದ್ಭಾಸಿನಿ. . . ॥
ಸರ್ವೇಶ್ವರಿ . . . ಕರುಣಾಕರಿ . . . . ।
ನಿರ್ವಿಘ್ನಮತಿದೋರು ವಾಗೀಶ್ವರಿ ॥ ಭಾರತಿ ॥೫॥